## ಬುಧವಾರ, ೧೬ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು, ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ, ಅಪರಾಹ್ನ ೩ ಘಂಟೆಗೆ, ಸಮಾವೇಶಗೊಂಡಿತು ಸಭಾಧ್ಯಕ್ಷ (ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್) ಅಧ್ಯಕ್ಷತೆ ವಹಿಸಿದ್ದರು.

ಪರಿಚಯ/ಯೋಗ್ಯತಾಪತ್ರಗಳನ್ನು ಪ್ರಸ್ತುತಪಡಿಸುವುದು ಮತ್ತು ದಾಖಲೆಗಳಿಗೆ ಸಹಿ ಮಾಡುವುದು.

ಕೆಳಗಿನ ಸದಸ್ಯರು ಪರಿಚಯ ಪತ್ರಗಳನ್ನು ಪ್ರಸ್ತುತಪಡಿಸಿ ಸಹಿ ಮಾಡಿರುತ್ತಾರೆ.

೧. ಶ್ರೀ ಕಿಶೋರಿ ಮೋಹನ್ ತ್ರಿಪಾಠಿ (ಪೂರ್ವರಾಜ್ಯಗಳ ಗುಂಪು/ಬಣ)

೨. ಶ್ರೀ ರಾಮಪ್ರಸಾದ್ ಪೋತಾಯ್ (ಪೂರ್ವ ರಾಜ್ಯಗಳ ಗುಂಪು)

**ಶ್ರೀ ಶ್ರೀಪ್ರಕಾಶ** (ಒಕ್ಕೂಟ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ತಾವು ಈ ಮಧ್ಯಾಹ್ನದ ಸಮಯದಲ್ಲಿ ಪ್ರಸ್ತುತಪಡಿಸುವ ಮೊದಲು ನಾನು ಸದನದ ಸದಸ್ಯರಿಗಿರುವ ಕಾರ್ಯಗಳು ಮತ್ತು ನಿಯಮಗಳ ವಿವರಗಳನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ಸಭೆಯ ಸದಸ್ಯರು ಟಾಂಗಾಗಳನ್ನು ಪೋರ್ಟಿಕೋದ(ಮೊಗಸಾಲೆ) ಒಳಗೆ ತರುವುದನ್ನು ನಿಷೇಧಿಸಲಾಗಿದೆ. ಆದರೆ ನಿನ್ನೆಯವರೆಗೂ ಟಾಂಗಾಗಳನ್ನು ಪೋರ್ಟಿಕೋದ ಒಳಗೆ ಸದಸ್ಯರು ತರುತ್ತಿದ್ದರು. ಇಂದು ಹೊರಗೆ ಮಳೆ ಸುರಿಯುತ್ತಿರುವುದರಿಂದ ಅನಿವಾರ್ಯವಾಗಿತ್ತು. ಆದರೆ ಯೂರೋಪಿನ ಅಧಿಕಾರಿ, ಟಾಂಗಾಗಳನ್ನು ಪೋರ್ಟಿಕೋದ ಹೊರಗೇ ನಿಲ್ಲಿಸುತ್ತಿದ್ದಾನೆ. ಸದಸ್ಯರೆಲ್ಲ ಮಳೆಯಲ್ಲಿ ನೆನೆಯುತ್ತಿದ್ದಾರೆ. ಟಾಂಗಾಗಳನ್ನು ಒಳಗೆ ತರಬೇಕಾಗುತ್ತದೆ ಎಂದಾಗ ಆ ಅಧಿಕಾರಿಯು ಇದು ನನ್ನ ಆದೇಶವಾಗಿರುತ್ತದೆ ಎಂದು ಉತ್ತರಿಸಿದ್ದಾರೆ. ಮತ್ತು ಕಾರುಗಳನ್ನು ಮಾತ್ರ ಒಳಗೆ ತರಲಾಗಿದೆ. ಈ ಕೀಳು ಮಟ್ಟದ ನಡವಳಿಕೆಯನ್ನು ನೀವು ಮತ್ತು ನಾವೆಲ್ಲರೂ ಸಹಿಸಲಾರೆವು.

**ಮಾನ್ಯ ಅಧ್ಯಕ್ಷರು** : ನಾನು ಆ ವಿಷಯದ ಬಗ್ಗೆ ಕಾರ್ಯದರ್ಶಿಯನ್ನು ವಿಚಾರಿಸುತ್ತೇನೆ.

### ಉಪಾಧ್ಯಕ್ಷರುಗಳು ಮತ್ತು ಸಮಿತಿಗಳ ಸದಸ್ಯರ ಚುನಾವಣೆಗಳು

**ಮಾನ್ಯ ಅಧ್ಯಕ್ಷರು** : ಡಾ. ಎಚ್.ಸಿ. ಮುಖರ್ಜಿ ಮತ್ತು ಶ್ರೀ ವಿ.ಟಿ. ಕೃಷ್ಣಮಾಚಾರಿ ಈ ಅಭ್ಯರ್ಥಿಗಳ ಹೆಸರನ್ನು ಸಂವಿಧಾನಸಭೆಯ ಉಪಾಧ್ಯಕ್ಷರ ಪದವಿಗೆ ಸೂಚಿಸಿ ಅನುಮೋದಿಸಲಾಗಿದೆ ಎಂದು ಪ್ರಕಟಿಸಲು ನನಗೆ ಸಂತೋಷವಾಗಿದೆ. ಹಾಗೂ ನಾನು ಅವರನ್ನು ಈ ಸಭೆಯ ಉಪಾಧ್ಯಕ್ಷರುಗಳೆಂದು ಘೋಷಿಸುತ್ತಿದ್ದೇನೆ.

ಸದನದ ನಿಯಮದಂತೆ ಬೇರೆ ಸಮಿತಿಯ ಸದಸ್ಯರನ್ನೂ ಆಯ್ಕೆಮಾಡಲು ನಿರ್ಧರಿಸಲಾಗಿತ್ತು. ನಾನು ಈಗ ಸದಸ್ಯರ ಚುನಾವಣಾ ಫಲಿತಾಂಶವನ್ನು ಪ್ರಕಟಿಸುತ್ತಿದ್ದೇನೆ.

ಜುಲೈ ೧೪ ೧೯೪೭ರಂದು ತೀರ್ಮಾನಿಸಿದಂತೆ ಸಂವಿಧಾನ ರಚನಾಸಭೆಯ ಇತರ ಸಮಿತಿಗಳಿಗೆ ಸದಸ್ಯರ ಚುನಾವಣೆಯಲ್ಲಿ ಈ ಕೆಳಗಿನ ಸದಸ್ಯರನ್ನು ಆಯ್ಕೆಮಾಡಲಾಗಿದೆ.

೧. **ಪರಿಚಯ ಪತ್ರ ಸಮಿತಿ**

ಶ್ರೀ ಭಕ್ಷಿ ತೇಕ್‌ಚಂದ್

ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್

ಶ್ರೀ ರಾಮ್ ಸಹಾಯ್

**೨. ಸದನ ಸಮಿತಿ**

ಶ್ರೀ ಸಿ.ಹೆಚ್ ಮೊಹಮ್ಮದ್ ಹಸನ್

ಶ್ರೀ ಉಪೇಂದ್ರನಾಥ್ ಬರ್ಮನ್

ಶ್ರೀ ಜೈನಾರಾಯಣ್ ವ್ಯಾಸ್

**೩. ನಿರ್ವಹಣಾ ಸಮಿತಿ**

ಹಾಜಿ ಸೈಯಿದ್ ಮೊಹಮ್ಮದ್ ಸಾದುಲ್ಲಾ

ಶ್ರೀ ಅಬ್ದುಲ್ ಖಾದರ್ ಮೊಹಮ್ಮದ್ ಶೇಕ್

ಶ್ರೀ ಸುರೇಂದ್ರ ಮೋಹನ್ ಘೋಷ್

ಶ್ರೀ ಜಗತ್‌ನಾರಾಯಣ್ ಲಾಲ್

ಆಚಾರ್ಯ ಜೆ.ಬಿ. ಕೃಪಲಾನಿ

ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್

ಶ್ರೀ ಚಂಗಲ್‌ರಾಯ ರೆಡ್ಡಿ ಕೆ.

ಶ್ರೀ ಬಲವಂತ್ ರಾಯ್ ಮೆಹತಾ

ದಿವಾನ್ ಚಮನ್ ಲಾಲ್

**೪. ಸಿಬ್ಬಂದಿ ಮತ್ತು ಹಣಕಾಸು ಸಮಿತಿ**

ಶ್ರೀ ಭವಾನಿ ಅರ್ಜುನ್ ಖಿಮ್ಜಿ

ಶ್ರೀ ಕೆ. ಶಾಂತಾರಾಮ್

ಚುನಾವಣೆಯಲ್ಲಿ ಸಮಿತಿಗಳಿಗೆ ಆಯ್ಕೆಗೊಂಡ ಎಲ್ಲ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲು ನನಗೆ ಎಲ್ಲ ಪ್ರಕರಣಗಳಲ್ಲೂ, ಖಾಲಿಬಿದ್ದ ಸ್ಥಾನಗಳಿಗೆ ಸಮನಾಗುವಷ್ಟೆ ಅಭ್ಯರ್ಥಿಗಳಿರುವುದರಿಂದ ಹರ್ಷವುಂಟಾಗಿದೆ.

**ಮಾನ್ಯ ಎಚ್.ವಿ. ಕಾಮತ್** (ಕೇಂದ್ರ ಪ್ರಾಂತ್ಯ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಆದೇಶದಲ್ಲಿರುವಂತೆ ಡಾ. ಎಚ್.ಸಿ. ಮುಖರ್ಜಿ ಮತ್ತು ಶ್ರೀ ಭಕ್ಷಿ ಮಾನ್ಯರೆ, ಟೇಕ್ ಚಂದ್ ಇರುವುದಿಲ್ಲ. ದಾಖಲೆಯಲ್ಲಿ ಸಹಿ ಮಾಡದೆ ಇದ್ದಲ್ಲಿ ಅವರು ಚುನಾಯಿತರಾಗಲು ಅರ್ಹತೆ ಇರುವುದಿಲ್ಲ.

**ಮಾನ್ಯ ಅಧ್ಯಕ್ಷರು** : ಅವರು ದಾಖಲೆಯಲ್ಲಿ ಸಹಿ ಮಾಡಿದ ನಂತರವೇ ಕಾರ್ಯ ನಿರ್ವಹಿಸುತ್ತಾರೆ. ಅವರು ಇಲ್ಲಿಗೆ ಬಂದ ತಕ್ಷಣ ಸಹಿ ಮಾಡುತ್ತಾರೆ.

**ಪ್ರಾಂತ್ಯಗಳ ಮಾದರಿ ಸಂವಿಧಾನದ ತತ್ತ್ವಗಳ ವರದಿ.**

**ಮಾನ್ಯ ಅಧ್ಯಕ್ಷರು** : ನಾವು ಈಗ, ನಿನ್ನೆ ತೆಗೆದುಕೊಂಡ ತೀರ್ಮಾನಗಳನ್ನು ಚರ್ಚಿಸೋಣ.

**ಖಾಜಿ ಸೈಯದ್ ಕರೀಮುದ್ದೀನ್** (ಕೇಂದ್ರ ಪ್ರಾಂತ್ಯಗಳು ಮತ್ತು ಬೇರಾರ್ : ಮುಸ್ಲಿಮ್) : ನಾನು ಸಂವಿಧಾನದ ಪ್ರಾಮುಖ್ಯದ ವಿಷಯನ್ನು ಪ್ರಸ್ತುತಪಡಿಸುತ್ತೇನೆ. ಪೂರ್ವ ರಜಪುತಾನ ರಾಜ್ಯಗಳ ಪ್ರತಿನಿಧಿಯಾದ ಮಹಾರಾಜ ನಾಗೇಂದ್ರ ಸಿಂಗ್‌ರವರು ಭಾರತದ ಸಾರ್ವಜನಿಕ ಸೇವೆಯ ಸದಸ್ಯರಾಗಿದ್ದಾರೆ. ಅವರ ಹೆಸರು ಸಂವಿಧಾನದಲ್ಲಿದೆ. ಆದರೆ ಅವರು ಸೇವೆಯಿಂದ ನಿವೃತ್ತರಾಗಿಲ್ಲ ಮತ್ತು ಅವರ ಸೇವಾವಧಿಯನ್ನು ಕೊನೆಗೊಳಿಸಲಾಗಿಲ್ಲ. ಸ್ವತಂತ್ರ ಭಾರತದ ಸಂವಿಧಾನಸಭೆಯ ಸದಸ್ಯರಾಗಿರುವ ಅವರು ವೇತನ ತೆಗೆದುಕೊಳ್ಳುವ ಸಾರ್ವಜನಿಕ ಸಿಬ್ಬಂದಿಯಾಗಬಹುದೆ? ೨೫ನೇ ವಿಭಾಗ ಸೌರ್ವಭೌಮತ್ವದ ಉತ್ತರಾಧಿಕಾರದ ಅಧಿನಿಯಮದ ಪ್ರಕಾರ "ಯಾವುದೇ ವ್ಯಕ್ತಿ ಸದನದ ಸಾಮಾನ್ಯಸಭೆಯ ಸದಸ್ಯನಾಗಿ ಆಯ್ಕೆಯಾದಾಗ ಸಾರ್ವಭೌಮತ್ವ ಕಚೇರಿಯಿಂದ ಲಾಭವನ್ನು ಪಡೆದಲ್ಲಿ ಆ ಅವಧಿಯಲ್ಲಿ ಅವನ ಅಧಿಕಾರವು ಅಸಿಂಧು ಎಂದು ಘೋಷಿಸಬೇಕು."

**ಮಾನ್ಯ ಅಧ್ಯಕ್ಷರು** : ನನಗೆ ತಿಳಿದ ವಿಚಾರವೆಂದರೆ ನಿರ್ದಿಷ್ಟ ವ್ಯಕ್ತಿಯ ಭಾರತ ಸರಕಾರದ ರಕ್ಷಣಾ ವಿಭಾಗದಲ್ಲಿ ಕೆಲಸಮಾಡದೆ ಇದ್ದಾಗ್ಯೂ ಅವನು ರಾಜ್ಯದ ದಿವಾನನಾಗಿ ಅಧಿಕಾರ ವಹಿಸಿಕೊಳ್ಳುತ್ತಾನೆ.

**ಖಾಜಿ ಸೈಯದ್ ಕರೀಮುದ್ದೀನ್ :** ಆದರೆ ಅವರು ಸೇವೆಯಿಂದ ನಿವೃತ್ತರಾಗಿಲ್ಲ ಮತ್ತು ಸೇವೆಯನ್ನು ಕೊನೆಗೊಳಿಸಲೂ ಇಲ್ಲ.

**ಮಾನ್ಯ ಅಧ್ಯಕ್ಷರು :** ನಮ್ಮ ನಿಯಮಗಳ ಪ್ರಕಾರ ಅದು ಅನರ್ಹತೆಯಲ್ಲ.

ನಿನ್ನೆ ಭಾಗ ೧ನ್ನು ಮಂಡಿಸಲಾಗಿತ್ತು. ಮತ್ತು ಅದನ್ನು ಮೌಲಾನಾ ಹಸ್ರತ್ ಮೋಹಾನಿಯವರ ಒಂದು ತಿದ್ದುಪಡಿಯಿತ್ತು. ತೀರ್ಮಾನ ಮತ್ತು ತಿದ್ದುಪಡಿಯನ್ನು ಈಗ ಚರ್ಚಿಸಬಹುದು.

## ಖಂಡ ೧ (ಮುಂದುವರೆದುದು).

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಸದನದಲ್ಲಿ ಹಿಂದೆ ಎಂದೂ ಕೇಳದಂತಹ ಭಾಷಣವನ್ನು ಕೇಳಿದೆವು. ಅದು ರಾಷ್ಟ್ರೀಯತೆ, ಸಮಾಜವಾದ, ಗಣರಾಜ್ಯ, ಸಮತಾವಾದ ಮುಂತಾದ ವಿಚಾರಗಳ ಮಿಶ್ರಣವಾಗಿತ್ತು. ಅದು ಭಾವಾವೇಶ ತುಂಬಿದ ಅದ್ವಿತೀಯ ಭಾಷಣವಾಗಿತ್ತು. ಮೌಲಾನಾ ಹಸ್ರತ್ ಮೋಹಾನಿಯವರ ಗೌರವೋದ್ದೀಪಕ ಹೇಳಿಕೆಗಳನ್ನು ಗಮವಿಟ್ಟು ಕೇಳಿದೆ. ಅವರು ಅನುಭವಸ್ಥರು ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ವ್ಯಕ್ತಿ ಎಂಬುವುದು ನಮಗೆ ತಿಳಿದ ವಿಚಾರವಾಗಿದೆ. ಇಂದಿನ ರಾಜಕೀಯ ಪ್ರಭಾವದಿಂದ ತಿರುವುಗಳೇನೇ ಇರಲಿ ನಿಲುವ್ವಳಿಯಂತೆ ಇರಲಿ ಅವರು ಕಾಂಗ್ರೆಸ್‌ನ ನಾಯಕರು ಮತ್ತು ಮಹಾತ್ಮ ಗಾಂಧಿಯವರೊಡನೆ ಕೈ ಜೋಡಿಸಿ ಹೋರಾಡಿದ ಮಹನೀಯರು ಎಂಬುದನ್ನು ನಾವು ಮರೆಯಲಾರೆವು. ಆದರೆ ನಿನ್ನೆ ಅವರು ಮಾಡಿದ ಭಾಷಣವು ಗೊಂದಲಕ್ಕೀಡುಮಾಡಿದೆ. ನಾವದನ್ನು ಗಮನಿಸಿದ್ದೇವೆ. ತಿದ್ದುಪಡಿಗೆ ಸಂಬಂಧಿಸಿದ್ದಕ್ಕಿಂತಲೂ ಹೆಚ್ಚಾಗಿ ಬೇರೆ ವಿಷಯಗಳ ಬಗ್ಗೆಯೇ ಮಾತಾಡಿದರು. ಮೌಲಾನ ಸಾಹೇಬರು ಹೇಳುವಂತೆ ರಾಜ್ಯಪಾಲರ ಬದಲಿಗೆ ರಾಷ್ಟ್ರಪತಿ ಎಂಬ ಪದದ ಬಳಕೆ ಅಷ್ಟೊಂದು ಸಮಂಜಸವಾದದ್ದಲ್ಲ. ಅವರ ಈ ಜಾದೂದಿಂದ ದಂಡ ಎಲ್ಲಾ ಪ್ರಾಂತ್ಯಗಳಲ್ಲಿ ಸಮಾಜವಾದಿ ಗಣರಾಜ್ಯಗಳ ನಿರ್ಮಾಣ ಯಶಸ್ವಿಯಾದೀತೆ? ನಮಗೆ ಚೆನ್ನಾಗಿ ತಿಳಿದಿರುವಂತೆ ಅಮೆರಿಕದಲ್ಲೂ ಸಹ ಅಧ್ಯಕ್ಷರ ಸ್ಥಾನ ಹಣಕಾಸು ನಿಯೋಗದ ಅಧ್ಯಕ್ಷರಿಗಿಂತ ಭಿನ್ನವಾಗಿರುತ್ತದೆ. ಜರ್ಮನಿಯ ನ್ಯಾಯಾಧೀಶರಾದ Reich skanzier-der-Furher ರವರಿಗೂ ಇತರ ನ್ಯಾಯಾಧೀಶರಿಗೂ ವ್ಯತ್ಯಾಸವಿರುವುದನ್ನು ಕಾಣಬಹುದು. ಆದ್ದರಿಂದ ರಾಜ್ಯಪಾಲರು ಎಂಬ ಈ ಪದಕ್ಕೆ ರಾಷ್ಟ್ರಪತಿ ಎಂದು ಬದಲಾವಣೆ ತರುವಲ್ಲಿ ಅಷ್ಟೊಂದು ವಿಶಿಷ್ಟತೆ ಇದೆ ಎಂದು ನನಗನಿಸುವುದಿಲ್ಲ.

ಇನ್ನೊಂದು ಅಂಶವೆಂದರೆ ಅವರು ಸಮಾಜವಾದದ ಬಗ್ಗೆ ಮಾತಾಡಿದರು. ಒಳ್ಳೆಯದು. ಪ್ರಗತಿಪರ ಬಣದ ನೇತಾಜಿ ಸುಭಾಷ್ ಚಂದ್ರ ಬೋಸ್ ರವರೂ ಕೂಡ ಹೇಳಿದ್ದೇನೆಂದರೆ ಈಗ ನಮ್ಮ ಮುಂದಿರುವ ಪ್ರಮುಖ ವಿಷಯವೆಂದರೆ ಭಾರತದೇಶ ಪರರ ಆಳ್ವಿಕೆಯಿಂದ ಮುಕ್ತಿ ಹೊಂದಿ ಸ್ವತಂತ್ರವಾಗಬೇಕು. ನಮ್ಮ ಕಾರ್ಮಿಕರ ಶಕ್ತಿ ಒಗ್ಗಟ್ಟಿನಿಂದ ಹೋರಾಡಿ ಸ್ವಾತಂತ್ರ್ಯ ಪಡೆಯಲು ಸವಮಾಜವಾದದ ನಿಟ್ಟಿನಲ್ಲಿ ಪುನರ್‌ನಿರ್ಮಾಣವಾಗಬೇಕು. ಪ್ರತಿ ವ್ಯಕ್ತಿಯ ಘನತೆ ಗೌರವವನ್ನು ಎತ್ತಿ ಹಿಡಿಯಲು, ಭಾರತ ಸ್ವಾತಂತ್ರ್ಯ ಪಡೆಯಬೇಕು. ಆಗ ಮಾತ್ರ ಸಾಧ್ಯ. ಆದರೆ ಇಂದು ಮುಸ್ಲಿಮ್ ಲೀಗ್‌ನ ಆಧಾರಸ್ತಂಭದಂತಿರುವ ಮೌಲಾನಾ ಹಸ್ರತ್ ಮೀಹಾನಿಯವರು ಸಮಾಜವಾದದ ಬಗ್ಗೆ ಸದನದಲ್ಲಿ ವಾದಿಸುತ್ತಾರೆ ಎಂದು ನಾನು ಅಪೇಕ್ಷಿಸಿರಲಿಲ್ಲ. ಐತಿಹಾಸಿಕ ಘಟನೆಯಾಗಿರುವ ಭಾರತದ ವಿಭಜನೆಯು ಮುಸ್ಲಿಮ್ ಲೀಗ್‌ನ ಬೇಡಿಕೆಯ ಪರಿಣಾಮ ಹಾಗೂ ಸಮಾಜವಾದದ ತತ್ತ್ವಗಳಿಗೆ ವಿರುದ್ಧವಾಗಿದೆ. ಒಂದು ವೇಳೆ ಮೌಲಾನಾ ಹಸ್ರತ್ ಮೋಹಾನಿ ಇಂದು ನಮ್ಮ ಮುಂದೆ ನಿಂತು ಸಮಾಜವಾದದ ಬಗ್ಗೆ ಬೋಧಿಸಿದಲ್ಲಿ ನಾನು ಅವರಿಗೆ "ಮೊದಲು ನಿಮ್ಮನ್ನು ನೀವು ತಿದ್ದಿಕೊಳ್ಳಿ" ಎನ್ನುತ್ತೇನೆ. ಯಾಕೆಂದರೆ ಕೋಮುವಾದಿ ಸಂಘಟನೆಯ ನಾಯಕರಾದವರು ನಮ್ಮ ಮುಂದೆ ಬಂದು ಸಮಾಜವಾದದ ವಿಚಾರಗಳನ್ನು ವಿವರಿಸುವ ಮೊದಲು ತಮ್ಮ ಕೋಮುವಾದದ

ಸಿದ್ಧಾಂತವನ್ನು ಬಿಡಲಿ. ನಾವು ನಾಯಕರುಗಳಾದ, ಸುಭಾಷ್ ಚಂದ್ರ ಬೋಸ್, ಮಹಾತ್ಮ ಗಾಂಧಿ, ಪಂಡಿತ್ ನೆಹರು, ಸರ್ದಾರ್ ಪಟೇಲ್ ಮುಂತಾದ ವಿವೇಚನಾಯುಕ್ತ ಮುತ್ಸದ್ದಿಗಳಿಂದ ಮಾರ್ಗದರ್ಶನ ಪಡೆದಿದ್ದೇವೆ. ಮುಸ್ಲಿಮ್ ಲೀಗ್ ಹಿಂದಿನಿಂದಲೂ ಕೋಮುವಾದ ಸಿದ್ಧಾಂತಗಳಿಂದಲೇ ಪ್ರಚೋದನೆ ಹೊಂದಿ ಅದರಲ್ಲೇ ಯಶಸ್ವಿಯಾಗಿದೆ. ನೀವು ಭಾರತದ ರಾಜಕೀಯ ಸಿದ್ಧಾಂತವನ್ನು ಪುನರ್‌ವಿಮರ್ಶಿಸುವ ಮೊದಲು ನಿಮ್ಮ ಪಾಕಿಸ್ತಾನದ ಕುರಿತು ಯೋಚಿಸಬಹುದಲ್ಲವೇ? ನೀವು ನಿಮ್ಮ ಪಾಕಿಸ್ತಾನದಲ್ಲಿರುವ ಕೋಮುವಾದಿಗಳ ಮನಮೊಲಿಸಿ ಭಾರತದ ಹಿಂದೂಗಳ ಜೊತೆ ಕೈ ಜೋಡಿಸಿ ಸಮಾಜವಾದಿ ಸ್ವತಂತ್ರ ಭಾರತವನ್ನು ಕಟ್ಟುವಲ್ಲಿ ಶ್ರಮಿಸಬಹುದಲ್ಲವೆ? ನಾನು ಪುನಃ ಹೇಳಬಯಸುವುದೇನೆಂದರೆ ಭಾರತ ಒಕ್ಕೂಟದ ಮುಖ್ಯಸ್ಥನನ್ನು ಪ್ರಾಂತ್ಯಗಳ ಮುಖ್ಯಸ್ಥರೊಂದಿಗೆ ಹೋಲಿಸಲಾಗದು. ಈ ದಿಸೆಯಲ್ಲಿ ನಾನು ಮೌಲಾನಾ ಹಸ್ರತ್ ಮೋಹಾನಿಯವರ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಒಂದು ವೇಳೆ ಈ ನಿರ್ಣಯವನ್ನು ಮಂಡಿಸಿದವರು ಉತ್ತರಿಸಲು ಬಯಸಿದಲ್ಲಿ ಮುಂದುವರಿಯಬಹುದು.

**ಮೌಲಾನಾ ಹಸ್ರತ್ ಮೋಹಾನಿ** (ಒಕ್ಕೂಟ ಪ್ರಾಂತ್ಯಗಳು) : ನಾನು ಕೆಲವು ವಿಷಯಗಳನ್ನು ಹೇಳಬಹುದೆ?

**ಮಾನ್ಯ ಅಧ್ಯಕ್ಷರು** : ತಿದ್ದುಪಡಿಯನ್ನು ಮಂಡಿಸುವವರು ಉತ್ತರಿಸುವ ಹಕ್ಕನ್ನು ಹೊಂದಿರುತ್ತಾರೆ.

**ಮೌಲಾನಾ ಹಸ್ರತ್ ಮೋಹಾನಿ** : ಹಿಂದೆ ಮಾತಾಡಿದವರು ಮೌಲಾನಾರವರು ಸಮಾಜವಾದಿಯಾದರೂ ಕೋಮುವಾದಿ ಎಂದೆಲ್ಲ ಹೇಳಿದರು. ನಾನು ವೈಯಕ್ತಿಕವಾಗಿ ನಡೆದು ಬಂದ ದಾರಿಯನ್ನು ಹೇಳಲಿಚ್ಛಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಸದನದಲ್ಲಿ ವಯಕ್ತಿಕ ವಿಷಯಗಳ ವಿವರಣೆಯಲ್ಲಿ ಆಸಕ್ತಿಯಿರುತ್ತದೆ ಎಂದು ನನಗನಿಸುವುದಿಲ್ಲ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿಯನ್ನು ಬೆಂಬಲಿಸಿ ಮಾತಾಡಿದವರಿಗೆ ಉತ್ತರಿಸುತ್ತೇನೆ. ಎರಡನೇ ಬಾರಿ ಇವರು ಪ್ರತಿ ಪ್ರಾಂತ್ಯಗಳಲ್ಲೂ ರಾಷ್ಟ್ರಪತಿ ಇರಬೇಕು ಎಂದು ಕಾತರತೆಯಿಂದ ನಿರೀಕ್ಷಿಸುತ್ತಿದ್ದಾರೆ. ಕೇಂದ್ರದಲ್ಲಿ ಆಗಲೇ ರಾಷ್ಟ್ರಪತಿ ಒಂದು ವೇಳೆ ಪ್ರಾಂತ್ಯಗಳಲ್ಲೂ ಅಧ್ಯಕ್ಷರಿರಬೇಕೆಂದರೆ ಅದು ಗೊಂದಲಕ್ಕೆಡೆ ಮಾಡಿಕೊಟ್ಟಂತಾಗುತ್ತದೆ. ರಾಜ್ಯಪಾಲರುಗಳು ವಯಸ್ಕಮತದಾನ ಪದ್ಧತಿಯಿಂದ ಆಯ್ಕೆಯಾಗಿ ಬರಬೇಕಾಗುತ್ತದೆ. ಆದ್ದರಿಂದ ತಪ್ಪು ಭಾವನೆಗಳಿಗೆಡೆ ಮಾಡಿಕೊಡುವ ವಿಚಾರಗಳು ನಮ್ಮ ನೂತನ ಸಂವಿಧಾನದಲ್ಲಿ ಕೂಡದು. ಅಸಮಂಜಸವಾದ ಹಳೆಯ ವಿಚಾರಗಳನ್ನು ಕಿತ್ತೊಗೆಯಬೇಕು ಹಾಗಾಗಿ ಈ ತಿದ್ದುಪಡಿ ಅಂಗೀಕಾರವಾಗುವುದಿಲ್ಲ ಎಂಬ ನಂಬಿಕೆ ನನಗಿದೆ.

**ಮಾನ್ಯ ಅಧ್ಯಕ್ಷರು** : ತಿದ್ದುಪಡಿ:

"೧ನೇ ಭಾಗದಲ್ಲಿ 'ರಾಜ್ಯಪಾಲರು' ಪದಕ್ಕೆ 'ಅಧ್ಯಕ್ಷರು' ಎಂದು ಪ್ರತಿಯೋಜಿಸಬೇಕು."

ತಿದ್ದುಪಡಿಯ ಪ್ರಸ್ತಾವವನ್ನು ನಿರಾಕರಿಸಲಾಗಿದೆ.

**ಗೌರವಾನ್ವಿತ ಪಂಡಿತ ಹೃದಯನಾಥ್ ಕುಂಜ್ರು** (ಒಕ್ಕೂಟ ಪ್ರಾಂತ್ಯಗಳು : ಜನರಲ್) : ಅಧ್ಯಕ್ಷರೆ, ಈ ಭಾಗವನ್ನು ಬಹುಮತಕ್ಕೆ ಪ್ರಸ್ತುತಪಡಿಸುವ ಮೊದಲು ನನಗೆ ಕೆಲವು ಅಭಿಪ್ರಾಯಗಳನ್ನು ಹೇಳಲು ಅನುಮತಿ ಕೊಡುವಿರಾ?

**ಮಾನ್ಯ ಅಧ್ಯಕ್ಷರು** : ನಾನು ಈ ತಿದ್ದುಪಡಿಯ ಬಗ್ಗೆ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಿದಾಗ ಯಾರೂ ಮಾತಾನಾಡಲು ಇಚ್ಛಿಸಲಿಲ್ಲ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** : ಚರ್ಚೆಯ ಖಂಡದ ಬಗ್ಗೆ ಇರದೆ ಇಡೀ ತಿದ್ದುಪಡಿಯ ಕುರಿತಾಗಿ ಇತ್ತು.

**ಮಾನ್ಯ ಅಧ್ಯಕ್ಷರು** : ಖಂಡಿತವಾಗಿಯೂ ತಿದ್ದುಪಡಿಯ ಮತ್ತು ಇಡೀ ಖಂಡದ ಬಗ್ಗೆಯೇ ಮುಕ್ತ ಚರ್ಚೆಗೆ ಅವಕಾಶಮಾಡಲಾಗಿತ್ತು. ಆದರೆ ಯಾರೂ ಮುಂದೆ ಬರದೆ ಇದ್ದ ಕಾರಣ ನಾನು ಪ್ರಶ್ನೆಗಳಿಲ್ಲ ಎಂದುಕೊಂಡೆ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** : ಒಂದು ವೇಳೆ ನೀವು ಮುಂದಿನ ಚರ್ಚೆಗೆ ಅವಕಾಶ ನೀಡುವುದೇ ಇಲ್ಲ ಎಂದಾದಲ್ಲಿ ನಾನು ಮಾತಾಡುವುದಿಲ್ಲ. ಆದರೆ ಸದಸ್ಯರಿಗೆ ಅಭಿಪ್ರಾಯ ವ್ಯಕ್ತಪಡಿಸಲು ಸಮ್ಮತಿಯಿದ್ದರೆ ನಾನು ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು** : ಈಗ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಮಯ ಮುಗಿದಿದೆ. ಮೂಲ ತಿದ್ದುಪಡಿಯನ್ನು ಮೆಚ್ಚಿದವರು ಖುಷಿಪಡಬಹುದು ಅಥವಾ ವಿರೋಧಿಗಳು 'ಇಲ್ಲ' ಎನ್ನುವರು.

ಮಂಡನೆಯನ್ನು ಅಂಗೀಕರಿಸಲಾಯಿತು.

## ಖಂಡ ೨

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಕಛೇರಿ ಅವಧಿಗೆ ಸಂಬಂಧಿಸಿದ ಭಾಗ–೨ನ್ನು ಮಂಡಿಸುತ್ತೇನೆ.

"೨(೧) ಅಕಾಲಿಕ ಮರಣ ಸಂಭವಿಸಿದಾಗ ಪದಚ್ಯುತಿ ರಾಜೀನಾಮೆ ಸಲ್ಲಿಸಿದಾಗ ಹೊರತಾಗಿ ರಾಜ್ಯಪಾಲರು ನಾಲ್ಕು ವರ್ಷಗಳ ಕಾಲ ಅಧಿಕಾರದಲ್ಲಿ ಇರುತ್ತಾರೆ."

"(೨) ರಾಜ್ಯಪಾಲರನ್ನು ಅವಧಿಗೆ ಮುಂಚಿತವಾಗಿ, ಸಂವಿಧಾನ ಉಲ್ಲಂಘನೆಗಾಗಿ ಪರಚ್ಯುತಿಗೊಳಿಸಲು ಅವಕಾಶವಿದೆ. ಇದಕ್ಕೆ ಮಹಾಭಿಯೋಗ ಎಂದು ಕರೆಯಲಾಗಿದೆ. ಸಂಸತ್ತು ಮಹಾಭಿಯೋಗವನ್ನು ತರಲು ಕೆಲವು ನಿಯಮಗಳನ್ನು ಅನುಸರಿಸಬೇಕು. ಅವುಗಳೆಂದರೆ, ಸದನದ ೧/೩ ಭಾಗದ ಸದಸ್ಯರು ಇಂತಹ (ನಿರ್ದಿಷ್ಟ) ಕಾರಣಕ್ಕೆ ರಾಜ್ಯಪಾಲರನ್ನು ಪದಚ್ಯುತಿಗೊಳಿಸುತ್ತಿದ್ದೇವೆ ಎಂದು ನಿರ್ಣಯಿಸಬೇಕು."

**ಡಾ. ಪಿ.ಎಸ್. ದೇಶಮುಖ್** : (ಕೇಂದ್ರ ಪ್ರಾಂತ್ಯ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಭಾಗ ೧ರಲ್ಲಿ ನನ್ನ ಒಂದು ತಿದ್ದುಪಡಿಯಿದೆ. ಆದರೆ ಅದನ್ನು ಪರಿಗಣಿಸಲಾಗಿಲ್ಲ. ಅದು ತಿದ್ದುಪಟ್ಟಿಗೆ ಸೇರಿಸಿದ ಹೆಚ್ಚುವರಿ ತಿದ್ದುಪಡಿಯಾಗಿದೆ.

**ಮಾನ್ಯ ಅಧ್ಯಕ್ಷರು** : ನನಗೀಗ ತಪ್ಪಾಗಿದೆಯೇನೋ ಎಂಬ ಆತಂಕವುಂಟಾಗಿದೆ. ಭಾಗ ೧ರಲ್ಲಿ ಇತರ ಕೆಲವು ಉಪತಿದ್ದುಪಡಿಗಳು ಸೇರಿಕೊಂಡಿವೆ. ಇದರ ಬಗ್ಗೆ ಕಳೆದ ರಾತ್ರಿ ತಿಳಿವಳಿಕೆ ಪತ್ರವನ್ನು ಸ್ವೀಕರಿಸಲಾಗಿದೆ. ನಾನು ಈ ತಿದ್ದುಪಡಿಗಳ ಮಂಡನೆಗೆ ಅವಕಾಶ ನೀಡಿರಲಿಲ್ಲ. ಈಗ ಒಂದಾದ ನಂತರ ಒಂದರಂತೆ ಆ ತಿದ್ದುಪಡಿಗಳನ್ನು ಮಂಡಿಸಲು ಅವಕಾಶ ನೀಡುವುದೊಳಿತು. ಯಾಕೆಂದರೆ ನನ್ನ ತಪ್ಪಿನಿಂದಾಗಿ ಆ ತಿದ್ದುಪಡಿಗಳ ಮಂಡನೆ ಅವಕಾಶ ಕಳೆದುಕೊಳ್ಳಬಾರದು.

(ಶ್ರೀ ಆರ್.ವಿ. ಧುಲೆಕರ್‌ರವರು ತಿದ್ದುಪಡಿಯನ್ನು ಮಂಡಿಸಿಲ್ಲ)

**ಡಾ. ಪಿ.ಎಸ್. ದೇಶ್‌ಮುಖ್** : ನನ್ನದು ಮಾನ್ಯರೆ,

**ಮಾನ್ಯ ಅಧ್ಯಕ್ಷರು** : ಅದು ಉಪಖಂಡ (೩)ರಲ್ಲಿ ಬರುತ್ತದೆ. ಅದನ್ನು ಈಗ ಮಂಡಿಸಲಾಗುವುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಾಟೇಲ್** : ನಾನು ಉಪಖಂಡ (೨)ನ್ನು ಮಂಡಿಸುವುದಿಲ್ಲ. ನಂತರ ಉಪಖಂಡ (೪) ಅದು ಮುಂದೆ ಉಪಖಂಡ (೩) ಆಗುತ್ತದೆ. ಅದು ಈ ರೀತಿ ಮುಂದುವರಿಯುವುದು.

"(೩) ಗವರ್ನರ್‌ರವರು ಮರುಚುನಾವಣೆಗೆ ಅರ್ಹರಾಗಿರುತ್ತಾರೆ ಆದರೆ ಒಂದೇ ಸಲ"

ನಾನು ಮೂರೂ ಉಪಭಾಗಗಳನ್ನು ಸದನದ ಸ್ವೀಕಾರಕ್ಕೆ ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು** : ಸಿಧ್ವಾರವರ ಎರಡು ತಿದ್ದುಪಡಿಗಳಿವೆ.

**ಶ್ರೀ ಆರ್.ಕೆ. ಸಿಧ್ವಾ :** (ಕೇಂದ್ರ ಪ್ರಾಂತ್ಯ ಮತ್ತು ಬೇರಾರ್ : ಸಾಮಾನ್ಯ) :

**ಮಾನ್ಯ ಅಧ್ಯಕ್ಷರು :** ಶಾಂತಾರಾಮ್ ತಮ್ಮ ತಿದ್ದುಪಡಿಯನ್ನು ಈಗ ಮಂಡಿಸಬಹುದು.

**ಶ್ರೀ ಶಾಂತಾರಾಮ್ :** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸುತ್ತೇನೆ.

"ಖಂಡ (೨)ರ ಉಪಖಂಡ (೨) 'ಸಂಯುಕ್ತ ಸಂಸತ್ತಿನ ಮೇಲ್ಮನೆಯಲ್ಲಿ ವಿಚಾರಣೆ ನಡೆಸಬೇಕು' ಈ ಬದಲಾಗಿ 'ವಿಶೇಷ ಆಯೋಗದ ವಿಚಾರಣೆಯ ನಂತರ ಸಂಯುಕ್ತ ಸಂಸತ್ತಿನ ಮೇಲ್ಮನೆಯಲ್ಲಿ ದೃಢೀಕೃತವಾಗಬೇಕು' ಎಂಬ ಪದಗಳನ್ನು ಪ್ರತಿಯೋಜಿಸಬೇಕು."

ಅಧ್ಯಕ್ಷರ ಪದಚ್ಯುತಿಗೆ ಸಂಬಂಧಿಸಿದಂತೆ ಮಹಾಭಿಯೋಗ ಪದ್ಧತಿಯನ್ನು ಅನುಸರಿಸಬೇಕು. ಕೆಳಮನೆ ಅಂದರೆ ಲೋಕಸಭೆ ಪದಚ್ಯುತಿ ನಿರ್ಣಯವನ್ನು ಮಂಡಿಸುತ್ತದೆ. ಮೇಲ್ಮನೆಯು ಆಯೋಗವನ್ನು ರಚಿಸಿ ವಿಚಾರಣೆಯ ಅನಂತರ ಸಾಬೀತಾಗಿದೆ ಎಂದು ಮನಗಂಡರೆ ಅದನ್ನು ದೃಢೀಕರಿಸುತ್ತದೆ ಎಂದೇ ತಿಳಿಸಿರುತ್ತೇನೆ. ಇಲ್ಲದಿದ್ದಲ್ಲಿ ರಾಜ್ಯಪಾಲರು ಮೇಲ್ಮನೆಯ ಮೂಲಕವೇ ವಿಚಾರಣೆಗೆ ಗುರಿಯಾಗಿದ್ದಾರೆ ಎಂಬ ತಪ್ಪು ತಿಳಿವಳಿಯುಂಟಾಗಬಹುದು. ರಾಜ್ಯಪಾಲರು ವಯಸ್ಕ ಮತದಾನದಿಂದ ಚುನಾಯಿತರಾಗಬೇಕಿದ್ದಾಗ ಆ ಪ್ರಾಂತ್ಯದ ಪ್ರತಿಷ್ಠೆಗೆ ಕುಂದುಂಟಾಗುತ್ತದೆ. ಸದನವು ಈ ತಿದ್ದುಪಡಿಯನ್ನು ಸ್ವೀಕರಿಸಬಹುದು ಎಂಬ ವಿಶ್ವಾಸವಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಉಪಖಂಡಗಳನ್ನು ಕೈ ಬಿಡುವ ವಿಷಯದಲ್ಲಿ ನಾನು ಹೇಳಲಿಚ್ಛಿಸುವುದೇನೆಂದರೆ, ಸರ್ದಾರ್ ವಲ್ಲಭಭಾಯಿ ಪಟೇಲರು ಅವುಗಳನ್ನು ಮಂಡಿಸಲಿ ನಂತರ ಅವುಗಳನ್ನು ತೆಗೆದು ಹಾಕುವ ಆವಶ್ಯವಿದ್ದಲ್ಲಿ ಹಾಗೆ ಮಾಡಬಹುದು. ಯಾಕೆಂದರೆ ಇದು ಸಮಿತಿಯ ವರದಿ ಆದುದರಿಂದ ಪ್ರಸ್ತಾವಕರು ಉಪಖಂಡಗಳನ್ನು ಯಥಾರೂಪದಲ್ಲಿ ಪ್ರಸ್ತಾವಿಸುವುದು ಸೂಕ್ತ. ಅನಂತರ ಅನಪೇಕ್ಷಣೀಯ ಭಾಗ ತಿರಸ್ಕೃತವಾಗಲು ಬಿಡಬೇಕು.

**ಮಾನ್ಯ ಅಧ್ಯಕ್ಷರು :** ಇಲ್ಲಿರುವ ಪ್ರಶ್ನೆಯೆಂದರೆ, ಸಮಿತಿಯ ವರದಿಯಲ್ಲಿರುವ ಯಾವುದೇ ಭಾಗವನ್ನು ತೆಗೆದುಹಾಕುವ ಅಧಿಕಾರ ಮಂಡಿಸುವವರಿಗಿರುವುದಿಲ್ಲ. ಇದನ್ನು ತಿದ್ದುಪಡಿಯ ಮೂಲಕವೇ ಮಾಡಬೇಕು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಾಟೇಲ್ :** ವಿರೋಧವು ತಾಂತ್ರಿಕ ಲಕ್ಷಣದಿಂದ ಕೂಡಿದ್ದು ಅಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಈ ತಾಂತ್ರಿಕ ಸಲಹೆಗಳು ಸೂಕ್ತವಾಗಿದ್ದಲ್ಲಿ ನನ್ನ ಅಭ್ಯಂತರವಿಲ್ಲ. ಅನಂತರ ಉಪಖಂಡ (೩) ಇರುತ್ತದೆ. ಆದರೆ ಪದದ ಅರ್ಥಗಳಲ್ಲಿ ವ್ಯತ್ಯಾಸವಿರುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಪಂಡಿತ್ ಪಂತ್‌ರವರು ಈಗ ಅವರ ತಿದ್ದುಪಡಿಯನ್ನು ಮಂಡಿಸುತ್ತಾರೆ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** (ಒಕ್ಕೂಟ ಪ್ರಾಂತ್ಯಗಳು : ಸಾಮಾನ್ಯ) : ಅಧ್ಯಕ್ಷರೆ, ನಾನು ಮಂಡಿಸುತ್ತಿದ್ದೇನೆ.

"ಖಂಡ (೨)ರ ಉಪಖಂಡ (೩)ವನ್ನು ತೆಗೆದುಹಾಕಬೇಕು. ಮಂಡಿಸುವವರು ಒಪ್ಪಿರುತ್ತಾರೆ ಮತ್ತು ಸದನದಲ್ಲಿ ಬಹಳ ಸದಸ್ಯರು ಇದೇ ಅಭಿಪ್ರಾಯ ಹೊಂದಿರುತ್ತಾರೆ. ಈ ಭಾಗವನ್ನಿಟ್ಟುಕೊಳ್ಳುವ ಇಚ್ಛೆ ನಮಗಾರಿಗೂ ಇಲ್ಲ. ಇದೇ ಭಾಗ ಕೇಂದ್ರದ ಕರಡು ಸಂವಿಧಾನದಲ್ಲಿತ್ತು ಆದರೆ ವಿಷಯವನ್ನು ಪರಿಶೀಲಿಸಲಾಗಿತ್ತು. ಅದರ ಅದು ಪ್ರಯೋಜನವಿಲ್ಲದಿರುವುದರಿಂದ ತೆಗೆದುಹಾಕಲಾಯಿತು. ಹಾಗಾಗಿ ವರದಿಯಲ್ಲಿ ಇದು ಇರುವುದಿಲ್ಲ. ಈ ಖಂಡದ ವಿವರಣೆ ಈ ರೀತಿ ಇರುತ್ತದೆ.

"ರಾಜ್ಯಪಾಲರು ಸತತವಾಗಿ ನಾಲ್ಕು ತಿಂಗಳಿಗೂ ಹೆಚ್ಚಿನ ಅವಧಿ ಗೈರುಹಾಜರಾಗಿದ್ದಲ್ಲಿ ಅಥವಾ ಕಾರ್ಯನಿರ್ವಹಿಸಲು ಅಸಮರ್ಥರಾದಲ್ಲಿ ಅಧಿಕಾರವನ್ನು ಕಳೆದುಕೊಳ್ಳುವರು"

ಆದರೆ ಯಾರು ಇವರ ಸಾಮರ್ಥ್ಯವನ್ನು ಅಳೆಯುವವರು? ಇದನ್ನೆಲ್ಲ ಪರಿಗಣಿಸಿ ನಾವು ಈ ಉಪಖಂಡ ಅಪ್ರಯೋಜಕ ಮತ್ತು ಕಾರ್ಯರೂಪದಲ್ಲಿ ತರಲು ಸಾಧ್ಯವಾಗದು ಎಂದು ನಿರ್ಧರಿಸಿದ್ದೇವೆ. ಅಲ್ಲದೇ ಪ್ರಾಂತ್ಯಗಳ ಸಂವಿಧಾನದಲ್ಲೂ ಕಾರ್ಯಗತಗೊಳಿಸಬೇಕು. ಮತ್ತು ಈ ಉಪಖಂಡವನ್ನು ತೆಗೆದುಹಾಕಬೇಕು.

**ಮಾನ್ಯ ಅಧ್ಯಕ್ಷರು :** ಇನ್ನೂ ಕೆಲವು ತಿದ್ದುಪಡಿಗಳಿವೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಅಧ್ಯಕ್ಷರೆ, ೨/೩ ಭಾಗದ ಸದಸ್ಯರ ಒಪ್ಪಿಗೆ ಸಾಕೆಂಬ ನಮ್ಮ ರಾಜ ನೈತಿಕ ನಿಪುಣರ ಸಲಹೆಯಂತೆ ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ.

**ಶ್ರೀ ಹೆಚ್.ವಿ. ಕಾಮತ್** (ಬಾಂಬೆ : ಸಾಮಾನ್ಯ) : ಉಪಖಂಡ (೩)ನ್ನು ತೆಗೆದುಹಾಕಬೇಕೆಂದು ನನ್ನ ಅಭಿಪ್ರಾಯವಾಗಿದೆ. ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.]*

(ಕೆಲವು ಗೌರವಾನ್ವಿತ ಸದಸ್ಯರಿಗೆ ತಿಳಿವಳಿಕೆ ಪತ್ರ ನೀಡಿದ್ದರಿಂದ ತಿದ್ದುಪಡಿಗಳನ್ನು ಮಂಡಿಸಿಲ್ಲ)

**ಮಾನ್ಯ ಅಧ್ಯಕ್ಷರು :** ಶ್ರೀ ಅಯ್ಯಂಗಾರ್ ನೀವು ಯಾವುದೇ ತಿದ್ದುಪಡಿಯನ್ನು ಮಂಡಿಸುವುದಿಲ್ಲವೆ?

**ಶ್ರೀ. ಎಂ. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಇಲ್ಲ ಮಾನ್ಯರೆ,

(ಕೆ. ಶಾಂತಾರಾಮ್, ಪಿ.ಎಸ್. ದೇಶ್‌ಮುಖ್ ಮತ್ತು ಎಚ್.ವಿ. ಪಾಟಸ್ಕರ್ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ.)

**ಮಾನ್ಯ ಅಧ್ಯಕ್ಷರು :** ಈ ಎಲ್ಲ ತಿದ್ದುಪಡಿಗಳೂ ನೋಟೀಸು ಸ್ವೀಕೃತವಾಗಿದೆ ಎಂದುಕೊಂಡಿದ್ದೇನೆ.

ಈಗ ಖಂಡ ಮತ್ತು ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ. ಯಾವುದೇ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಬಹುದು.

೨ನೇ ಖಂಡದ ೨ನೇ ಉಪಖಂಡದಲ್ಲಿ "ಪ್ರತಿ ಸಂದರ್ಭದಲ್ಲೂ ನಿರ್ಣಯಕ್ಕೆ ಸಂಬಂಧಿಸಿದ ಸದಸ್ಯರಲ್ಲಿ ೨/೩ ಭಾಗಕ್ಕೆ ಬೆಂಬಲವಿರಬೇಕು ಎಂಬ ಪದಗಳಿಗೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು"

"ಮೊದಲ ಸಂದರ್ಭದಲ್ಲಿ ನಿರ್ಣಯಕ್ಕೆ ಸಂಬಂಧಿಸಿದ ಸದನದ ಸದಸ್ಯರ ೨/೩ ಭಾಗಕ್ಕೆ ಕಡಿಮೆ ಇಲ್ಲದಂತೆ ಮತ್ತು ಎರಡನೆ ಸಂದರ್ಭದಲ್ಲಿ ೩/೪ ಭಾರ್ಗಕ್ಕೆ ಕಡಿಮೆ ಸದಸ್ಯರ ಬೆಂಬಲವಿರಬೇಕು."

**ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಅಧ್ಯಕ್ಷರೆ, ಖಂಡ ೨ರ ಉಪಖಂಡ (೩)ನ್ನು ತೆಗೆದುಹಾಕುವುದು ಕಷ್ಟವೆನಿಸುತ್ತದೆ. ಯಾಕೆಂದರೆ, ಉಪಭಾಗ(೩)ರಲ್ಲಿ ಕೆಲವು, ಒಳ್ಳೆಯ ಲಕ್ಷಣಗಳಿವೆ ಮತ್ತೆ ಕೆಲವು ಕಾರ್ಯಸಾಧ್ಯವಲ್ಲ. ಒಳ್ಳೆಯವೆಂದರೆ ರಾಜ್ಯಪಾಲರು ನಾಲ್ಕು ತಿಂಗಳುಗಳ ಕಾಲ ಗೈರುಹಾಜರಿದ್ದರೆ ಅಧಿಕಾರವನ್ನು ಬಿಟ್ಟಂತೆ ಲೆಕ್ಕ. ಇದು ಒಳ್ಳೆಯ ಸಲಹೆ ಆದರೆ ಒಂದು ವೇಳೆ ರಾಜ್ಯಪಾಲ ನಾಲ್ಕು ತಿಂಗಳುಗಳು ಮೀರಿದಂತೆ ಸತತ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಪ್ರಾಂತ್ಯ ಕೆಲಸಕಾರ್ಯಗಳು ನಿಂತುಬಿಡುತ್ತವೆ. ಹಾಗಾಗಿ ಉಪಖಂಡವು ಇರಬೇಕು.

ಉಪಖಂಡಕ್ಕೆ ಸಂಬಂಧಿಸಿದ ಇನ್ನೊಂದು ಅಂಶ ಅರ್ಥಾತ್ ರಾಜ್ಯಪಾಲರು ಕರ್ತವ್ಯ ನಿರ್ವಹಿಸುವ ಸಾಮರ್ಥ್ಯವಿಲ್ಲದಿದ್ದಲ್ಲಿ ಅಂದರೆ ಅವರ ನಿರಂತರ ಅಸಾಮರ್ಥ್ಯವನ್ನು ಗುರುತಿಸುವವರು ಯಾರು ಎಂಬುದಕ್ಕೆ ವ್ಯಾಖ್ಯೆಯಿಲ್ಲ.

**ಗೌರವಾನ್ವಿತ ಪಂಡಿತ ಗೋವಿಂದವಲ್ಲಭ ಪಂತ್ :** ನಾನು ಅನಗತ್ಯ ಚರ್ಚೆಯನ್ನು ನಿವಾರಿಸಲು ಕೆಲವು ಅನಿಸಿಕೆಗಳನ್ನು ಹೇಳಲೆ? ಇನ್ನೊಂದು ತಿದ್ದುಪಡಿಯಲ್ಲಿ ಇರುವಂತೆ ಉಪರಾಜ್ಯಪಾಲರ ನೇಮಕವಾಗಬೇಕು. ಇದು (೩)ನೇ ಖಂಡದಲ್ಲಿರುತ್ತದೆ. ಹೆಚ್ಚುವರಿ ಪಟ್ಟಿಯಲ್ಲಿಯ ೮ನೇ ಸಂಖ್ಯೆಯು ಪೇಪರಿನಲ್ಲಿದೆ. ಅದು ಪೂರಕಪಟ್ಟಿಯಾಗಿ ಪರಿಕಲ್ಪಿತವಾಗಿದೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈಗಾಗಲೇ ಹೇಳಿದಂತೆ ಆ ತಿದ್ದುಪಡಿಯು ಪೂರಕ ಅನೇಕ ಪಟ್ಟಿಯಲ್ಲಿದೆ. ಆದರೆ ನಮಗೆ ಅದರ ಬಗ್ಗೆ ಯಾವುದೇ ನೋಟೀಸ್ ನೀಡಿಲ್ಲ. ಅದೇನೇ ಇರಲಿ. ನನಗೆ ತಿಳಿದಂತೆ ಸದನದ ಗೌರವಾನ್ವಿತ ಸದಸ್ಯರು ಇದನ್ನು ನೋಡಿದಂತಿಲ್ಲ. ಒಂದು ವೇಳೆ ಇದಕ್ಕೆ ಸಂಬಂಧಿಸಿದ ತಿದ್ದುಪಡಿಯಿದ್ದಲ್ಲಿ ಮಂಡಿಸಬೇಕು. ಎಲ್ಲ ಸದಸ್ಯರ ಸಭೆ ಕರೆದು ಚರ್ಚೆಯಾಗಬೇಕು. ಒಳ್ಳೆಯ ತಿದ್ದುಪಡಿಯನ್ನು ಒಟ್ಟಿಗೆ ಸ್ವೀಕರಿಸಬೇಕು. ಈ ನಿಟ್ಟಿನಲ್ಲಿ ನನ್ನ ಅಭಿಪ್ರಾಯದಂತೆ ಉಪಖಂಡವನ್ನು ಉಳಿಸಿಕೊಳ್ಳಬೇಕು. ಅಬಾಧಿತವಾದ ನಿರಂತರ ಅಸಾಮರ್ಥ್ಯವೆಂಬುದು ಅಸ್ಪಷ್ಟ. ಅಪಾರ ಗೊಂದಲಕ್ಕೀಡುಮಾಡುತ್ತದೆ.

"ನಂತರದ ಉಪಖಂಡ ಅರ್ಥಮಾಡಿಕೊಳ್ಳಲು ಕಷ್ಟವೇ ಸರಿ. ಆದರೆ ಇಡೀ ಖಂಡವನ್ನು ವಿರೋಧಿಸುವುದಿಲ್ಲ. ಆದರೆ, ಅದು ನನಗೆ ಅರ್ಥವಾಗುವುದು ಕಷ್ಟವಾದ ಕಾರಣ, ಸ್ಪಷ್ಟನೆ ಬೇಡುತ್ತೇನೆ. ಆವಶ್ಯಕತೆಯಿದ್ದಲ್ಲಿ, ಉಪಖಂಡ (೪)ರಲ್ಲಿರುವಂತೆ ರಾಜ್ಯಪಾಲರು ಕೇವಲ ಒಂದೇ ಸಲ ಮರು ಚುನಾವಣೆಗೆ ಅರ್ಹರಿರುತ್ತಾರೆ. ಆದರೆ ಯಾವುದೇ ರಾಜ್ಯಪಾಲರು ಎರಡನೇ ಬಾರಿಯೂ ಅರ್ಹತೆ ಹೊಂದಿರುವು ದಿಲ್ಲವೇಕೆ ಎಂದು ನನಗನಿಸುವುದಿಲ್ಲ. ಒಂದು ವೇಳೆ ಅವರು ಒಳ್ಳೆಯ ರಾಜ್ಯಪಾಲರು ಆಗಿದ್ದಲ್ಲಿ ಅಥವಾ ಜನರ ಹಿತವನ್ನೇ ಬಯಸಿದಲ್ಲಿ ಎರಡನೇ ಚುನಾವಣೆಗೆ ಸ್ಪರ್ಧಿಸದಂತೆ ಈ ಉಪಖಂಡದ ಕೊನೆಯ ಭಾಗ ತಡೆಯುತ್ತದೆ. ಜನರ ಆಯ್ಕೆಗೆ ರಾಜಪಾಲರು ಒಳಗಾಗುವುದು ಉಚಿತವಲ್ಲ. ಒಳನುಗ್ಗಿ, ಕೊಳವೆಯನ್ನು ಸ್ವಚ್ಛಗೊಳಿಸಿ, ಕೆಳಗಿಳಿದು ಬಂದು ಮತ್ತೆ ತೂರುವಂತಾಯಿತು. ಒಳಹೋಗಲು ಆತ ತೆಳ್ಳಗಿರಬೇಕು. ಅದು ಅಭ್ಯಾಸವಾಗುತ್ತಿದ್ದಂತೆ ಆತ ನುಗ್ಗಲಾರದಷ್ಟು ದಪ್ಪನಾಗಿರುತ್ತಾನೆ. ನನಗನಿಸುತ್ತೆ, ಈ ಪರೀಕ್ಷೆ, ರಾಜ್ಯಪಾಲರ ಸಂದರ್ಭದಲ್ಲಿ ಅನ್ವಯಿಸದು. ಉಪಖಂಡದ ಕೊನೆಯ ಭಾಗ ಬಂಧಕ ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲರಿಗೆ, ನನ್ನ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತಿದ್ದೇನೆ. ಈ ವಿಷಯದಲ್ಲಿ ಅವಸರದ ತೀರ್ಮಾನ ತೆಗೆದುಕೊಳ್ಳದೆ ಸದನದಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು. ಇದೊಂದು ಅಸಂಗತ, ಅಪ್ರಾಯೋಗಿಕ ಖಂಡವೆಂಬುದನ್ನು ಮನಗಾಣಬೇಕು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸಿದ ಪ್ರಸ್ತಾವ ಅಷ್ಟೊಂದು ಚರ್ಚಾಸ್ಪದವಾಗಿಲ್ಲ. ಮೂರನೇ ಖಂಡವನ್ನು ಈಗ ನಾನು ಅದನ್ನು ಮಂಡಿಸುವುದಿಲ್ಲ, ಎಂಬುದನ್ನು ಆಗಲೆ ತಿಳಿಸಿದ್ದೇನೆ (ನಂತರದ ಖಂಡವೊಂದಕ್ಕೆ ಇರುವ ತಿದ್ದುಪಡಿಯನ್ನು ನಾನು ಆಗಲೆ ಪೂರ್ವಭಾವಿಯಾಗಿ ನಿರೀಕ್ಷಿಸಿದ್ದೇನೆ ಎಂಬ ಕಾರಣಕ್ಕಾಗಿ). ನೀವು ಈ ಉಪಖಂಡ (೩)ನ್ನು ಉಳಿಸಿಕೊಂಡರೆ ರಾಜ್ಯಪಾಲರ ಅಸಮರ್ಥತೆ ಅಥವಾ ಕರ್ತವ್ಯ ವಿಫಲತೆಯನ್ನು ಯಾರು ತೀರ್ಮಾನಿಸುವವರು ಎಂಬ ಅಂಶವನ್ನು ಪರಿಗಣಿಸಿದ್ದೇವೆ. ಈ ಎಲ್ಲ ತೊಡಕುಗಳನ್ನು ನಿವಾರಿಸಲು ನಾನು ಗೋವಿಂದವಲಭ ಪಂತ್ ಅವರ ತಿದ್ದುಪಡಿಯನ್ನು ಸ್ವೀಕರಿಸಿದ್ದೇನೆ. ೪ನೇ ಉಪಖಂಡದಲ್ಲಿ ಸೂಚಿಸಿದಂತೆ ಮರುಚುನಾವಣೆಗೆ ರಾಜ್ಯಪಾಲರು ಸ್ಪರ್ಧಿಸುವಲ್ಲಿ ನಿರ್ಬಂಧನೆ ಇರಕೂಡದು. ಒಂದು ವೇಳೆ ರಾಜ್ಯಪಾಲರು ಎರಡನೇ ಬಾರಿ ಚುನಾವಣೆಗೆ ನಿಂತರೆ ಅವಧಿ ಎಂಟು ವರ್ಷಗಳ ಕಾಲವಿರುತ್ತದೆ. ಉಪಖಂಡದ ಬಗ್ಗೆ ಸದನದಲ್ಲಿ ಚರ್ಚೆಯಾದಂತೆ ಮೂರನೇ ಸಲ ಅವರು ಚುನಾವಣೆಗೆ ನಿಲ್ಲರಾರರು. ಯಾಕೆಂದರೆ ಎರಡು ಅವಧಿಯಲ್ಲಿ ಅವರು ಅಧಿಕಾರದಲ್ಲಿದ್ದು ತಮ್ಮ ಅಧಿಕಾರವನ್ನು ಸಾಕಷ್ಟು ಸುಭದ್ರಗೊಳಿಸಿರುತ್ತಾರೆ. ಮೂರನೇ ಬಾರಿ ನಿಂತಾಗ ಹಬ್ಬುವ ಪುಕಾರಿನಿಂದ ಅವರನ್ನು ಪಾರು ಮಾಡಲಾಗದು. ಹಾಗಾಗಿ ಸಮಿತಿಯು ಈ ವಿಷಯದ ಬಗ್ಗೆ ಸಾಕಷ್ಟು ಯೋಜಿಸಿಯೇ ನಿರ್ಧರಿಸಿದೆ. ಆದ್ದರಿಂದ ಈಗ ನಾನು ಪಂಡಿತ್‌ರವರ ಸುಧಾರಿತ ತಿದ್ದುಪಡಿಯನ್ನು ತೆಗೆದುಕೊಂಡಿದ್ದೇನೆ ಇದನ್ನು ಸದನದಲ್ಲಿ ಅಂಗೀಕರಿಸಬೇಕು ನಾನು ಶ್ರೀ ಸಂತಾನಮ್‌ರವರ ತಿದ್ದುಪಡಿಯನ್ನು ಸ್ವೀಕರಿಸಿದ್ದೇನೆ ಎಂದು ಹೇಳುವುದನ್ನು ಮರೆತುಬಿಟ್ಟೆ.

**ಮಾನ್ಯ ಅಧ್ಯಕ್ಷರು :** ನಾನು ಎರಡು ತಿದ್ದುಪಡಿಯನ್ನು ಬಲವಂತಕ್ಕೆ ಪ್ರಸ್ತುತಪಡಿಸುತ್ತಿದ್ದೇನೆ. ಒಂದು ಖಂಡ (೨)ರ ಉಪಖಂಡಕ್ಕೆ ಸಂಬಂಧಿಸಿದ್ದು ಇನ್ನೊಂದು ಖಂಡ ೨ರ ಉಪಖಂಡ(೩), ಮಂಡಿಸಿದವರು, ಈ ಎರಡೂ ತಿದ್ದುಪಡಿಗಳನ್ನು ಸ್ವೀಕರಿಸಿದ್ದಾರೆ. ಹಾಗಾಗಿ ನಾನು ಇಡೀ ಭಾಗವನ್ನು ಸದನದ ಮುಂದೆ ಇಡುತ್ತೇನೆ. ಅದಕ್ಕಿಂತ ಮುಂಚೆ ತಿದ್ದುಪಡಿಗಳ ಒಪ್ಪಿಗೆಗೆ ಬಹುಮತ ಪಡೆಯಬೇಕು.

ಮಾನ್ಯ ಸಂತಾನಮ್‌ರವರ ತಿದ್ದುಪಡಿ ಕೆಳಗಿನಂತಿದೆ :

"ಭಾಗ ೨ರ ಉಪಭಾಗ (೨) 'ಸಂಯುಕ್ತ ಸಂಸತ್ತಿನ ಮೇಲ್ಮನೆಯಿಂದ ವಿಚಾರಣೆಯಾಗಬೇಕು' ಎಂಬ ಪದಗಳ ಬದಲಿಗೆ 'ಸದನದಿಂದ ರಚನೆಯಾದ ವಿಶೇಷ ಆಯೋಗದ ವಿಚಾರಣೆಯ ನಂತರ ಸಂಯುಕ್ತ ಸಂಸತ್ತಿನ ಮೇಲ್ಮನೆಯಿಂದ ದೃಢೀಕೃತವಾಗಬೇಕು.' ಎಂಬ ಪದಗಳನ್ನು ಪ್ರತಿಯೋಜಿಸಬೇಕು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಪಂಡಿತ್ ಗೋವಿಂದವಲ್ಲಭ ಪಂತ್‌ರವರ ಇನ್ನೊಂದು ತಿದ್ದುಪಡಿ ಈ ಕೆಳಗಿನಂತಿದೆ.

"ಖಂಡ (೨)ರ ಆ ಉಪಖಂಡ(೩)ನ್ನು ತೆಗೆದುಹಾಕಬೇಕು"

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಈಗ ಖಂಡ ೨, ತಿದ್ದುಪಡಿಯಾಗಿರುವುದನ್ನು ಬಹುಮತಕ್ಕೆ ಇಡಲಾಗಿದೆ.

ಖಂಡ ೨, ತಿದ್ದುಪಡಿಯಾದಂತೆಯೇ ಅಂಗೀಕರಿಸಲಾಯಿತು.

## ಖಂಡ ೩

**ಮಾನ್ಯ ಅಧ್ಯಕ್ಷರು :** ಈಗ ನಾವು ಖಂಡ ೩ಕ್ಕೆ ಹೋಗೋಣ

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ :** ಆಕಸ್ಮಿಕ ಖಾಲಿ ಜಾಗದ ನೇಮಕದ ಬಗ್ಗೆ

**ಮಾನ್ಯ ಅಧ್ಯಕ್ಷರು :** ಖಂಡ ೩ರ ತಿದ್ದುಪಡಿಯ ಅನಂತರ ಇನ್ನೊಂದು ಖಂಡ ಸೇರಿಸಬೇಕೆಂದು ನೋಟೀಸು ಬಂದಿದೆ. ಅದು ತಿದ್ದುಪಡಿಯಾಗಿ ಮಂಡಿಸಲ್ಪಡಬೇಕೋ ಏನೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈಗ ನಾವು ಅದನ್ನು ಅದು ಇದ್ದ ಹಾಗೇ ಚರ್ಚಿಸಿ ಅನಂತರ ಸರಿಯಾದ ಜಾಗದಲ್ಲಿ ಸೇರಿಸೋಣ.

**ಗೌರವಾನ್ವಿತ ಸರ್ದಾರ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತೇನೆ.

"ಆಕಸ್ಮಿಕ ಖಾಲಿ ಸ್ಥಾನಗಳು : (೧) ರಾಜ್ಯಪಾಲರ ಕಚೇರಿಯಲ್ಲಿರುವ ಖಾಲಿ ಆಕಸ್ಮಿಕ ಸ್ಥಾನಗಳನ್ನು ಪ್ರಾಂತ್ಯಗಳ ಶಾಸನಸಭೆಯ ಚುನಾವಣೆಯಲ್ಲಿ ಏಕವರ್ಗಾವಣೀಯ ಅನುಪಾತಾಧಾರಿತ ಪ್ರಾತಿನಿಧ್ಯದ ಮತದ ಮೂಲಕ ಭರ್ತಿಮಾಡಬೇಕು.

(೨) ರಾಜ್ಯಪಾಲರು ಸತತವಾಗಿ ಗೈರುಹಾಜರಾದಾಗ ಅವರ ಅಸಮರ್ಥತೆ ಅಥವಾ ನಾಲ್ಕು ತಿಂಗಳುಗಳ ಕಾಲ ಕಾರ್ಯನಿರ್ವಹಣೆಗೆ ವಿಫಲರಾದಾಗ ಸಂಯುಕ್ತ ಸರಕಾರದ ಅಧ್ಯಕ್ಷರು ರಾಜ್ಯಪಾಲರ ಕಾರ್ಯಗಳನ್ನು ನಿರ್ವಹಿಸಲು ಸೂಕ್ತವಾದ ವ್ಯಕ್ತಿಯನ್ನು ಏಕವರ್ಗಾವಣೀಯ ಮತದ ಮೂಲಕ ಆಯ್ಕೆ ಮಾಡುತ್ತಾರೆ. ಆಯ್ಕೆಯಾದ ವ್ಯಕ್ತಿ ರಾಜ್ಯಪಾಲರು ಮರು ಚುನಾವಣೆಯಲ್ಲಿ ಆಯ್ಕೆಯಾಗಿ ಅಥವಾ ಬೇರೆ ರಾಜ್ಯಪಾಲರು ಬರುವವರೆಗೆ ಕಚೇರಿಯ ಕಾರ್ಯ ನಿರ್ವಹಿಸುತ್ತಾರೆ."

ಇದರ ಬಗ್ಗೆ ಚರ್ಚೆಯಾದಾಗ ಕೆಲವು ಸಲಹೆಗಳನ್ನು ಸೂಚಿಸಲಾಗಿದೆ. ಪಂಡಿತ್ ಗೋವಿಂದವಲ್ಲಭ ಪಂತ್ ಅವರಿಂದ ಒಂದು ತಿದ್ದುಪಡಿ ಮಂಡಿಸಲಾಗಿದೆ. ಆದ್ದರಿಂದ ನಾನು ಏನೂ ಹೇಳಬಯಸುವುದಿಲ್ಲ.

(ವಿ.ಸಿ. ಕೇಶವರಾವ್, ಎಂ. ಅನಂತಶಯನಮ್ ಅಯ್ಯಂಗಾರ್ ಮತ್ತು ಶಿಬ್ಬನ್ ಲಾಲ್ ಸಕ್ಸೇನಾ ಅವರು ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ಮಾನ್ಯರೆ, ನಾನು ಮಂಡಿಸುತ್ತೇನೆ. ಮೂರನೇ ಭಾಗಕ್ಕೆ ಕೆಲವು ಬದಲಾವಣೆ ಮಾಡಬೇಕು.

"ಪ್ರತಿ ಪ್ರಾಂತ್ಯಗಳಿಗೆ ಉಪರಾಜ್ಯಪಾಲರಿರಬೇಕು. ಪ್ರತಿ ಸಾರ್ವತ್ರಿಕ ಚುನಾವಣೆಯ ಅನಂತರ ಪ್ರಾಂತ್ಯದ ಶಾಸನಸಭೆಯ ಮೂಲಕ ಏಕವರ್ಗಾವಣೀಯ ಅನುಪಾತಾಧಾರಿತ ಪ್ರಾತಿನಿಧ್ಯದ ಮತದಿಂದ ಆಯ್ಕೆಯಾಗಬೇಕು. ಉಪರಾಜ್ಯಪಾಲರು ರಾಜ್ಯಪಾಲರ ಗೈರುಹಾಜರಿಯಲ್ಲಿ ಅವರ ಕಾರ್ಯನಿರ್ವಹಿಸುವುದಲ್ಲದೆ ಕಚೇರಿಯ ಖಾಲಿ ಸ್ಥಾನಗಳನ್ನು ಭರ್ತಿಮಾಡುವ ಹಕ್ಕನ್ನು ಪಡೆದಿರುತ್ತಾರೆ."

ಖಂಡ(೩)ರ ಮೊದಲನೇ ಭಾಗ ಎಂದರೆ ಉಪಖಂಡ(೧), ನನ್ನ ತಿದ್ದುಪಡಿಯಲ್ಲಿ ನಿಗಮಿತವಾಗಿದೆ. ಅದು ಖಂಡ ೩ಕ್ಕಿಂತ ವಿಭಿನ್ನವಾಗಿರುವುದರಿಂದ ಅದನ್ನು ಸೇರಿಸಲು ಸಾಧ್ಯವಿಲ್ಲವೇನೋ. ಆಕಸ್ಮಿತ ಖಾಲಿ ಜಾಗಕ್ಕೆ ಸಂಬಂಧಿಸಿದ ಮೂಲಖಂಡದ ಕುರಿತು ಹೇಳುವುದಾದರೆ ರಾಜ್ಯಪಾಲರ ಅವಧಿಯಲ್ಲಿ ಆ ಜಾಗವನ್ನು

ಏಕವರ್ಗಾವಣೀಯ ಅನುಪಾತಾಧಾರಿತ ಪ್ರಾತಿನಿಧ್ಯದ ಮತದ ಮೂಲಕ ರಾಜ್ಯಪಾಲರು ಮರುಚುನಾವಣೆಯ ಅನಂತರ ಆಯ್ಕೆಗೊಳ್ಳುವ ಅವಧಿಯವರೆಗೆ ರಾಜ್ಯಪಾಲರನ್ನು ಪ್ರತಿಯೋಜನೆಯಾಗಿ ನೇಮಿಸಬೇಕು.

ಅಲ್ಪಾವಧಿಯಲ್ಲಿ ಖಾಲಿ ಜಾಗದ ಹುದ್ದೆ ಭರ್ತಿಮಾಡಲು ಉಪಖಂಡ (೨)ರಲ್ಲಿರುವಂತೆ ಸಂಯುಕ್ತ ಸರಕಾರದ ರಾಷ್ಟ್ರಪತಿಗಳು ರಾಜ್ಯಪಾಲರ ನಾಮನಿರ್ದೇಶನಮಾಡುತ್ತಾರೆ. ಆದರೆ ರಾಷ್ಟ್ರಪತಿಗೆ ಈ ಅಧಿಕಾರ ವಹಿಸುವುದು ಉಚಿತವಲ್ಲ. ಅಷ್ಟೇ ಅಲ್ಲದೆ ಅದು ಪ್ರಾಂತ್ಯಗಳ ಸ್ವಾಯತ್ತತೆಗೆ ಸಂಗತವಲ್ಲದ ವಿಚಾರ ಎಂದು ನನಗನಿಸುತ್ತದೆ. ಸಂವಿಧಾನದ ಪೂರ್ವಸಿದ್ಧತೆಯ ಅರಿವು ಶಾಸನಸಭೆಯ ಗೌರವಾನ್ವಿತ ಸದಸ್ಯರಿಗೂ ಇದೆ. ಸಂವಿಧಾನದ ಪ್ರಕಾರ ಉಪಾಧ್ಯಕ್ಷರು ಸಾರ್ವತ್ರಿಕ ಚುನಾವಣೆಯ ನಂತರ ಶಾಸನಸಭೆಯ ಮೂಲಕ ಆಯ್ಕೆಯಾಗುತ್ತಾರೆ. ಒಂದು ವೇಳೆ ಆಕಸ್ಮಿಕ ಖಾಲಿ ಜಾಗವುಂಟಾದಲ್ಲಿ ಬೇರೆ ವ್ಯಕ್ತಿಯು ಅಧ್ಯಕ್ಷರ ಕಾರ್ಯನಿರ್ವಹಣೆಯಲ್ಲಿ ತಲೆಹಾಕುವುದು ಉಚಿತವಲ್ಲ. ಈ ತಿದ್ದುಪಡಿಯ ಮುಖೇನ ನನ್ನ ಸಲಹೆಯೆಂದರೆ ಸಂಯುಕ್ತ ಆಳ್ವಿಕೆಯಲ್ಲಿ ಆಗಲೇ ಇರುವ ಪದ್ಧತಿಯೇ ಸೂಕ್ತವಾದುದು.

ಸದನದ ಸದಸ್ಯರಿಗೆ ತಿಳಿದಿರುವಂತೆ ವಿದೇಶದ ಕೆಲವು ಸಂವಿಧಾನಗಳ ಪ್ರಕಾರ ಉಪಾಧ್ಯಕ್ಷರೂ ಕೂಡ ರಾಷ್ಟ್ರಪತಿಗಳ ಜೊತೆಗೆ ಚುನಾವಣಾ ಮಂಡಲಿಯಿಂದ ಆಯ್ಕೆಯಾಗುತ್ತಾರೆ. ಉಪಾಧ್ಯಕ್ಷರಿಗೆ ಕಾರ್ಯ ನಿರ್ವಹಣೆಯ ಜವಾಬ್ದಾರಿ ಅಷ್ಟೊಂದು ಇರುವುದಿಲ್ಲ. ಹಾಗಾಗಿ ಉಪಾಧ್ಯಕ್ಷರ ಆಯ್ಕೆಗೆ ಅತಿ ಕ್ಲಿಷ್ಟಕರ ಪದ್ಧತಿ ಅನುಸರಿಸುವ ಅಗತ್ಯವೂ ಇಲ್ಲ. ಪರ್ಯಾಯ (ಪ್ರತಿಯೋಜಿತ) ರಾಜ್ಯಪಾಲರ ಕಾರ್ಯನಿರ್ವಹಣೆ ಅಲ್ಪ ಕಾಲಾವಧಿಯಾದ ಕಾರಣ, ನಾಲ್ಕು ವರುಷಗಳಲ್ಲಿ, ಎರಡನೇ ಚುನಾವಣೆ ಕ್ರಮಸಾಧ್ಯವಾದುದು. ಜೊತೆಗೆ ಚಿಂತೆ ಹಾಗೂ ವೆಚ್ಚಕ್ಕೀಡು ಮಾಡುವಂಥದ್ದು. ಸರಳವಾದ ರೀತಿಯಲ್ಲಿ ಆಯ್ಕೆಯಾಗಬೇಕು. ಇನ್ನು ಉಪರಾಜ್ಯಪಾಲರು ತಿದ್ದುಪಡಿಯಲ್ಲಿರುವಂತೆ ಶಾಸನಾಂಗ ಸಭೆಯಿಂದಲೇ ಆಯ್ಕೆಯಾಗುತ್ತಾರೆ ಮತ್ತು ಆಕಸ್ಮಿಕ ಜಾಗವನ್ನು ಅವರೆ ಭರ್ತಿಮಾಡಿ ರಾಜ್ಯಪಾಲರು ಪುನಃ ನೇಮಕವಾಗುವವರೆಗೂ ಅವರ ಕಾರ್ಯಭಾರವನ್ನು ವಹಿಸುತ್ತಾರೆ.

ಕೆಲವು ಸಂದರ್ಭಗಳಲ್ಲಿ ರಾಜ್ಯಪಾಲರು ರಾಷ್ಟ್ರೀಯ ವ್ಯವಹಾರ ನಿರ್ವಹಣ ಚತುರತೆಯ ಕಾರ್ಯ ನಿಮಿತ್ತ, ಸಾರ್ವಜನಿಕ ಹಿತಾಸಕ್ತಿಗಾಗಿ ಅಲ್ಪಾವಧಿಯಲ್ಲಿ ವಿದೇಶಗಳಿಗೆ ಪ್ರವಾಸಮಾಡಬೇಕಾಗುತ್ತದೆ. ಅಂತಹ ಸಮಯದಲ್ಲಿ ಆ ಕಾರ್ಯವನ್ನು ಉಪರಾಜ್ಯಪಾಲರು ನಿರ್ವಹಿಸಬೇಕು. ಈ ಪ್ರಶ್ನೆ, ಆಗಲೇ ನಾನು ನನ್ನ ಮೊದಲನೇ ತಿದ್ದುಪಡಿಯನ್ನು ಮಂಡಿಸಿದಾಗ ಸದನದ ಸದಸ್ಯರೊಬ್ಬರಿಂದ ಕೇಳಲಾಗಿತ್ತು. ಈಗ ಅದಕ್ಕೆ ಉತ್ತರ ರೂಪದಲ್ಲಿ ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ನೇರ ಅಭಿಪ್ರಾಯಗಳಿರುವ ಮತ್ತು ಸರಳವಾದ ಈ ತಿದ್ದುಪಡಿಯು ಸದನದಲ್ಲಿ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟು ಸಂವಿಧಾನಕ್ಕೆ ಸೇರಿಸಲಾಗುತ್ತದೆ. ಎಂಬ ವಿಶ್ವಾಸವಿದೆ.

**ಮಾನ್ಯ ಅಧ್ಯಕ್ಷರು** : ಶ್ರೀ ಸಂತಾನಮ್, ನಿಮ್ಮದೊಂದು ತಿದ್ದುಪಡಿಯಿದೆ.

**ಶ್ರೀ ಕೆ. ಸಂತಾನಮ್** : ನಾನು ಅದನ್ನು ಮಂಡಿಸಲಿಚ್ಛಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** : ಬಿ. ದಾಸ್

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ) : ನಾನೂ ಮಂಡಿಸಲಿಚ್ಛಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** : ದೇಶ್‌ಮುಖ್‌ರವರು ಖಂಡ ಸಂಖ್ಯೆ ೧ರ ತಿದ್ದುಪಡಿಯ ನೋಟಿಸು ಕೊಟ್ಟಿರುತ್ತಾರೆ. ಈಗ ನಾನು ಅದನ್ನು ಮಂಡಿಸಲೆ?

**ಡಾ. ಪಿ.ಎಸ್. ದೇಶ್‌ಮುಖ್** : ಅದು ಆಗಲೇ ಪಂಡಿತ್ ಪಂತ್‌ರವರ ತಿದ್ದುಪಡಿಯಲ್ಲಿ ಒಳಗೊಂಡಿದೆ. ಹಾಗಾಗಿ ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** : ಭಾಗವು ಮಂಡಿಸಲ್ಪಟ್ಟಿದೆ ಮತ್ತು ಪಂಡಿತ್ ಪಂತ್‌ರವರ ತಿದ್ದುಪಡಿಯನ್ನು ಮಂಡಿಸಲಾಗಿದೆ. ಈ ತಿದ್ದುಪಡಿಗಳ ಮೂಲಪ್ರಸ್ತಾವದ ಬಗ್ಗೆ ಯಾರಾದರೂ ಪ್ರಶ್ನೆಗಳನ್ನು ಅಥವಾ ಅಭಿಪ್ರಾಯಗಳನ್ನು ತಿಳಿಸಲು ಈಗ ಮುಕ್ತ ಅವಕಾಶ ನೀಡುತ್ತಿದ್ದೇನೆ.

**ಶ್ರೀ ನಜೀರುದ್ದೀನ್ ಅಹ್ಮದ್ :** ಈ ತಿದ್ದುಪಡಿಗೆ ಸಂಬಂಧಿಸಿದಂತೆ ಎರಡನೇ ಸಲ ಚರ್ಚಿಸಲು ನನಗೆ ಬಹಳ ಬೇಸರವಾಗಿದೆ. ಈಗ ಮಂಡಿಸಲ್ಪಟ್ಟಿರುವ ತಿದ್ದುಪಡಿಯ ಬಗ್ಗೆ ನಮಗೆ ಯಾವುದೇ ಸುತ್ತೋಲೆ ಕಳಿಸಿಲ್ಲ. ಇಲ್ಲಿ ಮಂಡಿಸಿದಾಗಲೇ ನಮಗೆ ಅದರ ಇರುವಿಕೆ ತಿಳಿದಿದೆ. ಹಾಗಾಗಿ ಇದರ ಸಲಹೆಗಳನ್ನು ಅನುಸರಿಲು ಕಷ್ಟವಾಗುತ್ತದೆ. ಇದರ ಮೂಲಖಂಡಗಳನ್ನು ಬಹಳ ಕಾಳಜಿವಹಿಸಿ ಅನುಭವಸ್ಥ ಕರಡು ತಯಾರಕರು, ರಾಜಕೀಯ ತಜ್ಞರು, ಸಂವಿಧಾನದ ಕಾನೂನು ಕಟ್ಟಳೆಗಳನ್ನು ಬಲ್ಲವರು ತಯಾರಿಸಿರುತ್ತಾರೆ. ಅದೇ ರೀತಿ ತಿದ್ದುಪಡಿಗಳನ್ನು ಗಂಭೀರವಾಗಿ ಪರಿಗಣಿಸಿ ಸೇರಿಸಬೇಕು. ನಾವು ಸಾಧಾರಣ ತಿಳಿವಳಿಕೆಯುಳ್ಳವರು. ಈ ಖಂಡವನ್ನು ಮತ್ತು ಇದರೊಳಗೆ ಹಠಾತ್ತನೆ ತೂರಿಬರುವ ತಿದ್ದುಪಡಿಗಳು, ಮತ್ತೆ ಅವು ಹೊತ್ತು ತರುವ ಸಂವಿಧಾನಿಕ ಪ್ರಶ್ನೆಗಳನ್ನು ನಮ್ಮಂಥವರು ಅರ್ಥಮಾಡಿಕೊಳ್ಳುವುದು ಬಲು ಕಷ್ಟ. ಇದೊಂದು ಗಂಭೀರವಾದ ತಿದ್ದುಪಡಿ.

ಇದು ಮೂಲಖಂಡದ ಸ್ವರೂಪ–ಲಕ್ಷಣಗಳನ್ನೆ ಬದಲಾಯಿಸುವಂತಹುದು. ಇದರ ಪರಿಣಾಮ ಖಂಡದ ಮೇಲೆ ಯಾವ ರೀತಿಯದು ಎಂಬುದನ್ನು ಪರಿಶೀಲಿಸಲು ನಮಗೆ ಕಾಲಾವಕಾಶ ಕೊಡದೆ, ಇದನ್ನು ಅಂಗೀಕರಿಸಬಾರದು. ಮೂಲಖಂಡಕ್ಕೆ ಅಸಂಖ್ಯ ತಿದ್ದುಪಡಿಗಳು ಬಂದಿರುವುದಾಗಿ ತಿಳಿದುಬಂದಿದೆ. ಇವೆಲ್ಲವೂ ಈ ತಿದ್ದುಪಡಿಯ ಬೆನ್ನಹಿಂದೆ ಹುಟ್ಟಿಕೊಂಡವು ಎಂಬುದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ, ಈ ಖಂಡವನ್ನು ತಾರಾತುರಿಯಲ್ಲಿ ಅಂಗೀಕರಿಸಬಾರದು.

ಮಾನ್ಯರೆ, ತಮಗೆ ಯಾ ಈ ಸದನಕ್ಕೆ ದೊರೆಯಬಹುದಾದ ಕಿಂಚಿತ್ತಾದರೂ ಕಾಲಾವಕಾಶ ನಮಗೆ ಕೊಡಬೇಕು. ನಾವು ಸಹಕಾರ ಮನೋಭಾವದಿಂದ ನಿಮ್ಮತ್ತ ಬರುತ್ತೇವೆ. ನಮಗ ಕೆಲಕಾಲ ಒದಗಿಸಿ. ಇದು ಪ್ರಸ್ತಾವಕರಲ್ಲಿ ನಮ್ಮ ವಿನಂತಿ. ಅವರೆಲ್ಲ ರಾಷ್ಟ್ರದ ಮಹಾನ್ ಮುತ್ಸದ್ದಿಗಳು. ನಾವು ಸಾಧಾರಣ ಸಂವಿಧಾನದ ಪ್ರಗಲ್ಭ ಪಾಂಡಿತ್ಯವಿಲ್ಲದವರು. ತಮ್ಮ ಸಹಾನುಭೂತಿಯನ್ನು ನಿರೀಕ್ಷಿಸುತ್ತೇವೆ.

**ಮಾನ್ಯ ಅಧ್ಯಕ್ಷರು :** ಇನ್ನೂ ಯಾರಾದರೂ ಈ ಭಾಗದ ಮತ್ತು ತಿದ್ದುಪಡಿಯ ಬಗ್ಗೆ ಮಾತಾಡುವವರಿದ್ದಾರೆಯೆ?

**ಶ್ರೀ ಬಿ. ಪಾಕರ್ ಸಾಹಿಬ್ ಬಹದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಪ್ರಶ್ನೆಯೆಂದರೆ, ಸದನವು ಚರ್ಚೆಗೆ ಪರಿಗಣಿಸಬೇಕಾದದ್ದು ಮೂಲಖಂಡವನ್ನು ಅಥವಾ ಬದಲಾವಣೆಗೊಂಡ ಖಂಡವನ್ನು. ಆಗಲೇ ಪ್ರಸ್ತಾವಕರು ಸಾಕಷ್ಟು ತಿದ್ದುಪಡಿಯನ್ನು ಸ್ವೀಕರಿಸುವ ಬಗ್ಗೆ ಕಾರಣಗಳನ್ನು ತಿಳಿಸಿದ್ದಾರೆ. ನಾಲ್ಕು ವರ್ಷಗಳ ಮಧ್ಯೆ ಚುನಾವಣೆಗೆಂದು ಅನಾವಶ್ಯಕವಾಗಿ ಗೊಂದಲವನ್ನು ಸೃಷ್ಟಿಸುವುದು ಬೇಡ ಇದರ ನಿವಾರಣೆಗಾಗಿ ಉಪರಾಜ್ಯಪಾಲರನ್ನು ಸಾರ್ವತ್ರಿಕ ಚುನಾವಣೆಯ ಮೂಲಕವೇ ಆಯ್ಕೆಮಾಡುವುದು ಸೂಕ್ತವಾಗಿದೆ. ಆದ್ದರಿಂದ ತಿದ್ದುಪಡಿಯು ಕೆಲವು ಸಲಹೆಗಳಿಗೆ ನನ್ನ ಬೆಂಬಲವಿದೆ. ಆದರೆ ಇಲ್ಲಿರುವ ಪ್ರಮಾಣಾನುಸಾರ ಪ್ರಾತಿನಿಧ್ಯತೆಗನುಸಾರವಾಗಿ ಏಕವರ್ಗಾವಣೀಯ ಮತದ ಬಗ್ಗೆ ಸಂಶಯವಿದೆ. ನಾನು ತಮ್ಮನ್ನು ಕೇಳುವುದಷ್ಟೆ ಈ ಪದ್ಧತಿ ಅಂದರೆ ಅನೇಕರಲ್ಲಿ ಒಬ್ಬನನ್ನು ಆರಿಸುವುದು ನಿಮ್ಮ ಸಲಹೆ, ಆದರೆ ಅದು ಎಷ್ಟರ ಮಟ್ಟಿಗೆ ಸಂವಿಧಾನಾತ್ಮಕವಾಗಿ ಪರಿಣಾಮಕಾರಿಯಾದೀತು? ಎಷ್ಟರ ಮಟ್ಟಿಗೆ ಅರ್ಹತೆಯಿರುವ ವ್ಯಕ್ತಿಯ ಆಯ್ಕೆಯಲ್ಲಿ ಯಶಸ್ವಿಯಾಗಬಹುದು. ಎಂಬುದು ಮುಖ್ಯ. ಏಕವರ್ಗಾವಣೀಯ ಮತದ ಮೂಲಕ ಕೆಲವೇ ಗುಂಪುಗಳಿಂದ ಅಥವಾ ಮತದಾರರಿಂದ ಒಬ್ಬ ವ್ಯಕ್ತಿಯನ್ನು ಆಯ್ಕೆಮಾಡುವುದರಿಂದ ಕಾರ್ಯಸಾಧ್ಯವಿಲ್ಲ. ಹಾಗಾಗಿ ಈ ವಿಷಯ ಮುಖ್ಯವಾಗಿ ಮೂಲ ಕರಡು ತಯಾರಿಕರೊಂದಿಗೆ ಮತ್ತು ತಜ್ಞರೊಂದಿಗೆ ಸದನದಲ್ಲಿ ಚರ್ಚೆಯಾಗಬೇಕು ನಾನು ಪ್ರತ್ಯೇಕವಾಗಿ ಯಾವುದೇ ತಿದ್ದುಪಡಿಯನ್ನು ಮಂಡಿಸಿದ್ದರೂ ನನ್ನ ಅಭಿಪ್ರಾಯ ಸದನದಲ್ಲಿ ಮನ್ನಣೆ ಪಡೆಯುತ್ತದೆ ಎಂಬ ನಂಬಿಕೆಯಿದೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಹಿಂದೆ ಮಾತಾಡಿದವರ ಅಭಿಪ್ರಾಯದಂತೆ

ಉಪರಾಜ್ಯಪಾಲರು ಪ್ರಾಂತ್ಯದ ಚುನಾವಣೆಯಲ್ಲಿ ವಯಸ್ಕ ಮತದಾನದಿಂದ ಆಯ್ಕೆಯಾಗಬೇಕು. ಚುನಾವಣೆಯು ಕೇವಲ ೧೫೦ ರಿಂದ ೨೦೦ ಮತದಾರಿರುವ ಪ್ರಾಂತ್ಯಗಳಿಂದ ನಡೆಯುತ್ತದೆ. ಅದು ಅಷ್ಟೇನೂ ಕಷ್ಟಕರವಲ್ಲ. ಇಂತಹ ಪದ್ಧತಿ ಇನ್ನಿತರ ಸಂಘ ಸಂಸ್ಥೆಗಳಲ್ಲೂ ಪ್ರಮಾಣಾನುಸಾರ ಪ್ರಾತಿನಿಧ್ಯದಿಂದ ಏಕವರ್ಗಾವಣೀಯ ಮತದ ಮೂಲಕ ಆಯ್ಕೆಯಾಗುತ್ತದೆ. ಉದಾಹರಣೆಗೆ ರಾಜ್ಯಸಭೆ ಚುನಾವಣಾ ಮಂಡಲಿಗಳಲ್ಲಿ ೩,೦೦೦ದಷ್ಟು ಸಂಖ್ಯಾಬಲವಿರಬಹುದು ಹಾಗಾಗಿ ಪ್ರಮಾಣಾನುಸಾರ ಪ್ರಾತಿನಿಧ್ಯದಿಂದ ಏಕವರ್ಗಾವಣೀಯ ಆವಶ್ಯಕತೆಯಿಲ್ಲ. ಹಾಗಾಗಿ ತಿದ್ದುಪಡಿಯನ್ನು ಸ್ವೀಕರಿಸಬಹುದು.

**ಗೌರವಾನ್ವಿತ ಜೆ.ಆರ್.ಎಮ್. ರೆವರೆಂಡ್ ನಿಕೋಲಸ್ ರಾಯ್** : (ಅಸ್ಸಾಮ್ : ಸಾಮಾನ್ಯ) : ಅಧ್ಯಕ್ಷರೆ, ನಾನು ತಿದ್ದುಪಡಿಯ ಬಗ್ಗೆ ಮಾತಾಡುತ್ತಿದ್ದೇನೆ; ರಾಜ್ಯಪಾಲರ ಕಚೇರಿಯಲ್ಲಿರುವ ಆಕಸ್ಮಿಕ ಖಾಲಿ ಜಾಗದ ಬಗ್ಗೆ. ಈ ಸಮಸ್ಯೆ ಉಪರಾಜ್ಯಪಾಲರಿಂದ ಬಗೆಹರಿಯುವುದಿಲ್ಲ. ತಿದ್ದುಪಡಿ ಹೇಳುವುದೇನೆಂದರೆ ; "ಪ್ರತಿ ಪ್ರಾಂತ್ಯಕ್ಕೂ ಒಬ್ಬ ರಾಜ್ಯಪಾಲರಿರುತ್ತಾರೆ. ಅವರು ಪ್ರತಿ ಸಾರ್ವತ್ರಿಕ ಚುನಾವಣೆಯ ನಂತರ ಪ್ರಾಂತ್ಯಗಳ ಶಾಸನಸಭೆಯಿಂದ ಪ್ರಮಾಣಬದ್ಧವಾದ ಪ್ರಾತಿನಿಧ್ಯದ ಪದ್ಧತಿಯಲ್ಲಿ ಏಕವರ್ಗಾವಣೀಯ ಮತದಿಂದ ಆಯ್ಕೆಯಾಗುತ್ತಾರೆ. ಉಪರಾಜ್ಯಪಾಲರು ರಾಜ್ಯಪಾಲರ ಕಚೇರಿಯಲ್ಲಿರುವ ಆಕಸ್ಮಿಕ ಜಾಗನ್ನು ಭರ್ತಿಮಾಡುತ್ತಾರೆ ಮತ್ತು ರಾಜ್ಯಪಾಲರ ಗೈರುಹಾಜರಿಯಲ್ಲಿ ಅವರ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

ಆದರೆ ರಾಜ್ಯಪಾಲರ ಮತ್ತು ಉಪರಾಜ್ಯಪಾಲರ ಕಚೇರಿಯಲ್ಲಿ ಆಕಸ್ಮಿಕ ಸ್ಥಾನ ತೆರವಾದಾಗ ಬಿಕ್ಕಟ್ಟು ತಲೆದೋರುತ್ತದೆ. ಇದಕ್ಕೆ ಪೂರ್ವಸಿದ್ಧತೆಯೇ ಇಲ್ಲದ ಹಾಗಾಗುತ್ತದೆ. ಆದ್ದರಿಂದ ತಿದ್ದುಪಡಿಯ ಬದಲಿಗೆ ಮೂಲಖಂಡವನ್ನೇ ಕರಡು ಸಂವಿಧಾನಕ್ಕೆ ಸೇರಿಸುವುದು ಉಚಿತವೆನಿಸುತ್ತದೆ. ಪ್ರತಿ ಸಲ ರಾಜ್ಯಪಾಲರ ಕಚೇರಿಯಲ್ಲಿ ಆಕಸ್ಮಿಕ ಸ್ಥಾನ ತೆರವಾದಾಗ ಪ್ರಾಂತ್ಯದ ವಿಧಾನಸಭೆಗಳು ಅದನ್ನು ತುಂಬುತ್ತವೆ. ಆದರೆ ಉಪರಾಜ್ಯಪಾಲರ ಕಚೇರಿಯಲ್ಲಿ ಅದೇ ಸಮಸ್ಯೆ ಉಂಟಾದಾಗ ಯಾರು ಆ ಜಾಗವನ್ನು ಭರ್ತಿಮಾಡುತ್ತಾರೆ ಎಂಬ ವಿವರ ತಿದ್ದುಪಡಿಯಲ್ಲಿಲ್ಲ. ಹಾಗಾಗಿ ಮೂಲಖಂಡವನ್ನೇ ಸಂವಿಧಾನಕ್ಕೆ ಸೇರಿಸಬೇಕು.

**ಶ್ರೀ ಕೆ.ಎಮ್. ಮುನ್ಷಿ** : (ಬಾಂಬೆ : ಸಾಮಾನ್ಯ) : ಅಧ್ಯಕ್ಷರೆ, ಪಾಕರ್ ರವರ ನಿವೇದನೆಗೆ ಸಂಬಂಧಿಸಿದಂತೆ ಖಂಡದಲ್ಲಿ ಅಳವಡಿಸಿದ ಪ್ರಮಾಣಾತ್ಮಕ ಪ್ರಾತಿನಿಧ್ಯ ಪದ್ಧತಿಯಲ್ಲಿ ಏಕವರ್ಗಾವಣೀಯ ಮತದ ಬಗ್ಗೆ ಸಾಕಷ್ಟು ವಿವರಣೆ ಇದೆ. ಒಂದು ವೇಳೆ ಭಾಗ ೩ರಲ್ಲಿ ಈ ಪದ್ಧತಿಯ ಚುನಾವಣೆಯ ವಿಧಾನವಿಲ್ಲದಿದ್ದಲ್ಲಿ ಉಪರಾಜ್ಯಪಾಲರು ೧೧/₃ ಭಾಗಕ್ಕಿಂತ ಕಡಿಮೆ ಸದಸ್ಯರಿಂದ ಚುನಾಯಿತರಾಗಬೇಕು. ಪ್ರಮಾಣಾನುಸಾರ ಪ್ರಾತಿನಿಧ್ಯದ ತತ್ತ್ವದ ಮೇಲೆ, ಏಕವರ್ಗಾವಣೀಯ ಮತವಿಧಾನದಲ್ಲಿ ಚುನಾವಣೆಯಲ್ಲಿ ಎರಡನೇ ಮತವನ್ನು ವರ್ಗಾಯಿಸುವುದರಿಂದ ಯಾರೇ ಗೆಲ್ಲಲಿ, ಅವರಿಗೆ ಇತರರಿಗಿಂತ ೧೧/₃ಯಷ್ಟು ಮತ್ತು ಒಂದು ಹೆಚ್ಚುವರಿ ಮತ ಸಂದಿರುತ್ತದೆ. ಆದುದರಿಂದ ಆ ಪದ್ಧತಿಯೇ ಹೆಚ್ಚು ಸೂಕ್ತ.

ರೆವರೆಂಡ್ ನಿಕೋಲ್ಸ್ ರವರ ಅಭಿಪ್ರಾಯದಂತೆ ರಾಜ್ಯಪಾಲರು ಮತ್ತು ಉಪರಾಜ್ಯಪಾಲರು ಇಬ್ಬರೂ ಕಚೇರಿಯನ್ನು ಬಿಟ್ಟಾಗ ಆ ಹಂತದಲ್ಲಿ ಬಿಕ್ಕಟ್ಟು ಉಂಟಾಗುತ್ತದೆ. ಒಂದು ವೇಳೆ ಮೂರನೇ ವ್ಯಕ್ತಿಯನ್ನು ಆಯ್ಕೆಮಾಡಿದಲ್ಲಿ ಅಲ್ಲೂ ಇದೇ ಸಮಸ್ಯೆಯುಂಟಾಗುತ್ತದೆ. ಆದ್ದರಿಂದ ನಾವು ಸರ್ವಸಾಮಾನ್ಯ ನಿಯಮವನ್ನು ಅಳವಡಿಸಬೇಕು. ಆದರೆ ಇಷ್ಟೊಂದು ದೂರದೃಷ್ಟಿಯ ಅಗತ್ಯವಿಲ್ಲ. ರಾಜ್ಯಪಾಲರು ಮುಂದುವರಿಯುತ್ತಾರೆ ಇಲ್ಲದಿದ್ದಲ್ಲಿ ಉಪರಾಜ್ಯಪಾಲರು ಅವಧಿ ಮುಗಿಯುವವರೆಗೆ ರಾಜ್ಯಪಾಲರು ಕಾರ್ಯ ನಿರ್ವಹಿಸುತ್ತಾರೆ ಎಂದೇ ಆಶಿಸೋಣ.

**ಶ್ರೀ ರೋಹಿಣಿ ಕುಮಾರ್ ಚೌಧುರಿ** : (ಅಸ್ಸಾಮ್ : ಸಾಮಾನ್ಯ) : ಅಧ್ಯಕ್ಷರೆ, ಸಮಿತಿಯು ಈ ವರದಿಯನ್ನು ಸದನಕ್ಕೆ ಸಲ್ಲಿಸಿದಾಗ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂಥವರು ಇದ್ದುದರಿಂದ ಸಾಕಷ್ಟು ಚರ್ಚಿಸಲಾಗಿದೆ. ಪಂಡಿತ್ ಪಂತ್‌ರಂಥ ತಜ್ಞರನ್ನು, ಅಂದರೆ ನೀತಿಯುತರೂ, ಬುದ್ಧಿವಂತರೂ ಆದವರನ್ನು

ಟೀಕಿಸುವುದೇಕೆಂದು ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಕಾರ ಉಪರಾಜ್ಯಪಾಲರ ಸಾಮಾನ್ಯ ಕರ್ತವ್ಯವೇನು? ಕೇವಲ ರಾಜ್ಯಪಾಲರ ಗೈರುಹಾಜರಿಯಲ್ಲಿ ಅವರ ಕರ್ತವ್ಯವನ್ನು ನಿಭಾಯಿಸುವುದೆ? ಅಥವಾ ಆಕಸ್ಮಿಕ ಜಾಗ ಭರ್ತಿ ಮಾಡುವುದಕ್ಕೆಂದೇ ಅವರನ್ನು ನೇಮಕಮಾಡುವುದೆ? ಇದರಿಂದ ಅವರ ಸಾಮರ್ಥ್ಯಕ್ಕೆ ಕುಂದುಂಟಾಗುವುದಿಲ್ಲವೇ ಈ ಪ್ರಶ್ನೆಗಳ ಬಗ್ಗೆ ಯೋಚಿಸಬೇಕಾಗಿದೆ. ಮಾನ್ಯರೆ, ಈ ತಿದ್ದುಪಡಿ ಬಹಳ ಗೊಂದಲಮಯವಾಗಿದೆ. ಒಂದು ವೇಳೆ ರಾಜ್ಯಪಾಲರು ಚುನಾವಣೆಯಾದ ತತ್‌ಕ್ಷಣ (ನಗುತ್ತಾ) ದೇವರ ಪಾದ ಸೇರಿದರೆ? ನಂತರ ಕೆಲವೇ ಜನರಿಂದ ಆಯ್ಕೆಯಾದ ಉಪರಾಜ್ಯಪಾಲರೇ ರಾಜ್ಯಪಾಲರ ಸ್ಥಾನ ಹೊಂದುವರೆ? ಅಮೆರಿಕದ ಉಪಾಧ್ಯಕ್ಷರು ಅಧ್ಯಕ್ಷರ ಕಾರ್ಯ ನಿರ್ವಹಿಸಿ ಅದೇ ಸ್ಥಾನದ ಸೌಲಭ್ಯಗಳನ್ನು ಪಡೆಯುತ್ತಾರೆ. ಆದರೆ ಅವರು ಸಾರ್ವತ್ರಿಕ ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಹಾಗಾಗಿ ಇಲ್ಲಿ ಕೆಲವೇ ಜನರಿಂದ ಆಯ್ಕೆಯಾದ ಉಪರಾಜ್ಯಪಾಲರಿಗೆ ಅಷ್ಟೊಂದು ಸೌಲಭ್ಯ ಯಾಕೆ ನೀಡಬೇಕು? ತಮ್ಮಿಂದ ಸೂಕ್ತ ಉತ್ತರ ನಿರೀಕ್ಷಿಸುತ್ತಿದ್ದೇನೆ. ಪ್ರಾಂತ್ಯದ ಉಪರಾಜ್ಯಪಾಲರಿಗೆ ಸಂಬಳ ನೀಡಬೇಕೆ ಅಥವಾ ವೇತನವಿಲ್ಲದೆ ಕಾರ್ಯ ನಿರ್ವಹಿಸುವರೆ? ಒಂದು ವೇಳೆ ಸಂಬಳವಿದ್ದಲ್ಲಿ ಯಾಕೆ ಉಪರಾಜ್ಯಪಾಲರ ನೇಮಕವಾಗಬೇಕು ಬಡ ಪ್ರಾಂತ್ಯಗಳಾದ ಅಸ್ಸಾಮ್ ಅಥವಾ ಒರಿಸ್ಸಾಗಳಿಗೆ ಹೊರೆಯಾಗುವುದಿಲ್ಲವೆ?

**ಶ್ರೀ ದೇವಿ ಪ್ರಸಾದ್ ಖೈತಾನ್** : (ಬಂಗಾಳ : ಸಾಮಾನ್ಯ) : ಮಾನ್ಯರೆ, ನಾವು ಈ ಕರಡನ್ನು ಅರ್ಥಮಾಡಿಕೊಳ್ಳುವಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರು ಹೇಳಿದ ಮಾತನ್ನು ನೆನೆಪಿಡಬೇಕು. ಅವರು ಈ ಖಂಡವು ಪ್ರಾರಂಭದ ಹಂತದಲ್ಲಿದೆ. ಇದರಲ್ಲಿರುವ ಮಿತಿಮೀರಿದ ಅಂಶಗಳನ್ನು ಪರಿಶೀಲಿಸಿ ನಂತರ ದೃಢೀಕರಿಸಲಾಗುವುದು. ಇದು ಇನ್ನೊಂದು ಸಮಿತಿಯಲ್ಲಿ ಪರಿಶೀಲಿಸಲ್ಪಟ್ಟು ನಂತರ ಸದನದ ಮುಂದಿಡಲಾಗುವುದು. ಮೂಲ ಕರಡಿನಲ್ಲಿ ಈ ರೀತಿ ಇರುತ್ತದೆ. "ರಾಜ್ಯಪಾಲರು ೪ ತಿಂಗಳು ಸತತವಾಗಿ ಗೈರುಹಾಜರಿದ್ದರೆ, ಕಾರ್ಯ ನಿರ್ವಹಿಸುವುದಕ್ಕೆ ವಿಫಲರಾದಲ್ಲಿ ಅಥವಾ ಅಸಮರ್ಥತೆಯಿದ್ದಲ್ಲಿ ಕಚೇರಿಯನ್ನು ಬಿಡಬೇಕಾಗುತ್ತದೆ."

ಇದು ಬಹಳ ಗೊಂದಲಕ್ಕೀಡುಮಾಡಿದೆ. ಯಾಕೆಂದರೆ ರಾಜ್ಯಪಾಲರು ಒಂದು ವೇಳೆ ಅಧಿಕಾರ ಹೊಂದಲು ಅಸಮರ್ಥರಾದಲ್ಲಿ ಅಥವಾ ಅಧಿಕಾರ ನಿರ್ವಹಿಸಲು ವಿಫಲರಾದಲ್ಲಿ ಅಂದರೆ, ಅವರ ಸಾಮರ್ಥ್ಯ ಅರಿಯುವುದು ಕಷ್ಟಕರ ಒಂದು ವೇಳೆ ಅವರ ಆರೋಗ್ಯ ಕೆಟ್ಟಲ್ಲಿ ಕರ್ತವ್ಯಕ್ಕೆ ಗೈರುಹಾಜರಾಗಬಹುದು. ಕೆಲವು ಜನರ ದೃಷ್ಟಿಯಲ್ಲಿ ಅವರು ಸಾಮರ್ಥ್ಯವಿರುವವರು ಎಂದಾದರೆ ಇನ್ನು ಕೆಲವರ ಅಭಿಪ್ರಾಯದಲ್ಲಿ ಅವರಿಗೆ ಸಾಮರ್ಥ್ಯವಿಲ್ಲ ಎಂದಾದೀತು.

**ಮಾನ್ಯ ಅಧ್ಯಕ್ಷರು** : ಪ್ರಸ್ತಾವಕರು ಉತ್ತರಿಸಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ಏನೂ ಹೇಳಲಾಗದು ಯಾಕೆಂದರೆ ತರುವಾಯದ ಭಾಷಣಕಾರರು ಹಿಂದಿನ ಭಾಷಣಕಾರರಿಗೆ ಉತ್ತರಿಸಿದ್ದಾರೆ. ಇದು ಬಹಳ ಸರಳವಾದ ಭಾಗವಾಗಿದೆ ಮತ್ತು ಕಚೇರಿಯ ಭಾಗವನ್ನು ಭರ್ತಿಮಾಡಲಾಗುವುದು ಎಂದು ವಿವರಿಸುತ್ತದೆ. ಪಂಡಿತ್ ಗೋವಿಂದವಲ್ಲಭ ಪಂತ್ ರವರು ಮಂಡಿಸಿದ ತಿದ್ದುಪಡಿಯಲ್ಲಿ ಸಾಕಷ್ಟು ಸಲಹೆಗಳನ್ನು ನೀಡಲಾಗಿದೆ. ಇಲ್ಲಿರುವ ಸಂಶಯವೆಂದರೆ ಒಂದು ವೇಳೆ ರಾಜ್ಯಪಾಲರು ಮತ್ತು ಉಪರಾಜ್ಯಪಾಲರು ಇವರಿಬ್ಬರೂ ಗೈರುಹಾಜರಾಗಿದ್ದಾಗ ಏನೂ ಮಾಡಬೇಕೆಂಬುದಾಗಿದೆ. ಈ ರೀತಿಯ ಸಂದಿಗ್ಧ ಪ್ರಸಂಗ ಯಾವ ಸಂವಿಧಾನದಲ್ಲಾದರೂ ಇರಬಹುದು. ಆದರೆ ಈ ಸಮಸ್ಯೆಗಳಿಗೆ ಪರಿಹಾರವೂ ಇದ್ದೇ ಇರುತ್ತದೆ. ಇದು ಸದನಕ್ಕೂ ತಿಳಿದ ವಿಷಯವಾಗಿದೆ. ಆದ್ದರಿಂದ ಒಂದು ವೇಳೆ ಯಾವುದೇ ಅನಪೇಕ್ಷಿತ ಬಿಕ್ಕಟ್ಟು ಉಂಟಾದಲ್ಲಿ ಶಾಸನಸಭೆ ಕಾಳಜಿ ವಹಿಸುತ್ತದೆ. ಮತ್ತು ಸೂಕ್ತ ಪೂರ್ವಸಿದ್ಧತೆಯನ್ನು ಮಾಡುತ್ತದೆ. ಆದ್ದರಿಂದ ಅನಾವಶ್ಯಕ ಸಲಹೆಗಳಿಗೆ ಆಸ್ಪದ ಕೊಡದೆ ಪಂಡಿತ್ ಗೋವಿಂದವಲ್ಲಭ ಪಂತ್ ರವರ ತಿದ್ದುಪಡಿಯನ್ನು ಅಂಗೀಕರಿಸುಬಹುದು ಎಂಬುದು ನನ್ನ ವಿಚಾರ.

**ಮಾನ್ಯ ಅಧ್ಯಕ್ಷರು :** ಖಂಡ ೩ರ ಒಂದು ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿ ಹೀಗಿದೆ:

"ಖಂಡ ೩ಕ್ಕೆ, ಈ ಕೆಳಗಿನ ಬದಲಾವಣೆಯಾಗಬೇಕು.

"ಪ್ರತಿ ಪ್ರಾಂತ್ಯಕ್ಕೆ ಉಪರಾಜ್ಯಪಾಲರಿರುತ್ತಾರೆ. ಅವರು ಪ್ರತಿ ಸಾರ್ವತ್ರಿಕ ಚುನಾವಣೆಯ ನಂತರ ಪ್ರಾಂತ್ಯ ಶಾಸನಸಭೆಯಿಂದ ಪ್ರಮಾಣಾತ್ಮಕ ಪ್ರಾತಿನಿಧ್ಯದ ಪದ್ಧತಿಯಂತೆ ಏಕವರ್ಗಾವಣೀಯ ಅಮತದಿಂದ ಆಯ್ಕೆಯಾಗುತ್ತಾರೆ. ಉಪರಾಜ್ಯಪಾಲರು ರಾಜ್ಯಪಾಲರ ಕಚೇರಿಯಿಂದ ಆಕಸ್ಮಿಕ ಖಾಲಿ ಜಾಗವನ್ನು ತುಂಬುವುದಲ್ಲದೆ ರಾಜ್ಯಪಾಲರ ಉಳಿದ ಅವಧಿಯವರೆಗೆ ತುಂಬುವುದಲ್ಲದೆ, ರಾಜ್ಯಪಾಲರ ಕರ್ತವ್ಯವನ್ನು ಅವರೇ ನಿಭಾಯಿಸುತ್ತಾರೆ."

**ಮಾನ್ಯ ಅಧ್ಯಕ್ಷರು :** ಪ್ರಸ್ತಾವ ಹೀಗಿದೆ:

"ಖಂಡ ೩ನ್ನು ತಿದ್ದುಪಡಿಯಲ್ಲಿರುವಂತೆ ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ ೪

**ಗೌರವಾನ್ವಿತ ಸರ್ದಾರ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಮಂಡಿಸಲು ವಿನಂತಿಸಿಕೊಳ್ಳುತ್ತೇನೆ.

"ಸಂಯುಕ್ತ ಭಾರತದ ಪ್ರತಿ ಪ್ರಜೆಯು ೩೫ ವರ್ಷಗಳ ನಂತರ ರಾಜ್ಯಪಾಲರ ಚುನಾವಣೆಗೆ ಸ್ಪರ್ಧಿಸಲು ಅರ್ಹನಿರುತ್ತಾನೆ"

ಇದು ಬಹಳ ಸರಳವಾದ ಭಾಗವಾಗಿರುತ್ತದೆ.

**ಮಾನ್ಯ ಅಧ್ಯಕ್ಷರು :** ಈ ಭಾಗಕ್ಕೆ ಸಂಬಂಧಿಸಿದಂತೆ ವಿವಿಧ ತಿದ್ದುಪಡಿಗಳಿವೆ.

**ಶ್ರೀ ಎಚ್.ವಿ. ಕಾಮತ್ :** ನಾನು ಈಗಾಗಲೇ ಹೇಳಿದ ಉನ್ನತ ಅಧಿಕಾರದ ಈ ಸ್ಥಾನಕ್ಕೆ ಸ್ಪರ್ಧಿಸಲು ಮಹಿಳೆಗೂ ಅರ್ಹತೆ ಇರಬೇಕು. ಅವಳಿಗೂ ರಾಜ್ಯಪಾಲರಾಗುವ ಹಕ್ಕಿದೆ. ೪೦ ವರ್ಷಗಳ ಒಳಗೆ ಅನುವು ಮಾಡಿದಲ್ಲಿ ಪ್ರೌಢಿಮೆ ಬುದ್ಧಿವಂತಿಕೆ ಹಾಗೂ ಪರಿಪಕ್ವತೆಯಿರುತ್ತದೆ ಹಾಗಾಗಿ ನಾನು ನನ್ನ ತಿದ್ದುಪಡಿಯಲ್ಲಿ ಒತ್ತಡ ಹೇರುವುದಿಲ್ಲ.

**ಶ್ರೀ ವಿ.ಸಿ ಕೇಶವ್ ರಾವ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಯಾವುದೇ ತಿದ್ದುಪಡಿಯನ್ನು ಮಂಡಿಸಲಿಚ್ಛಿಸುವುದಿಲ್ಲ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ನಾನು ಮಂಡಿಸಲು ಇಚ್ಛಿಸುತ್ತೇನೆ.

"ಖಂಡ ೪ಕ್ಕೆ ಸೇರಿದ ಉಪಭಾಗ (೨) ಮತ್ತು ಭಾಗ ೪(೧), (೨) ಇದನ್ನು ಮನರಂಕಿತಗೊಳಿಸಬೇಕು. (renumbered) ರಾಜ್ಯಪಾಲರ ಸ್ಥಾನಕ್ಕೆ, ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿ ಯಾವುದೇ ಸರಕಾರಿ ಕಚೇರಿಗಳಲ್ಲಿ ವೇತನ ಪಡೆಯುವ ಸಿಬ್ಬಂದಿಯಾಗಿರಕೂಡದು. ಮಾನ್ಯರೆ, ಇದು ಸರ್ವೆಸಾಮಾನ್ಯವಾದ ನಿಯಮವಾಗಿರುತ್ತದೆ. ಸಾರ್ವಜನಿಕ ಕಚೇರಿ ಸಿಬ್ಬಂದಿ ಚುನಾವಣೆಗೆ ನಿಲ್ಲಬಾರದೆಂಬ ನಿಯಮವನ್ನು ಸಂವಿಧಾನಕ್ಕೆ ಸೇರಿಸಬೇಕು. ಯಾಕೆಂದರೆ, ಒಬ್ಬ ದಕ್ಷ ಅಧಿಕಾರಿಯನ್ನು ಕಚೇರಿಯವರೇ ಹುರಿದುಂಬಿಸಿ ರಾಜ್ಯಪಾಲರ ಚುನಾವಣೆಗೆ ನಿಲ್ಲಿಸುವ ಸಾಧ್ಯತೆ ಇರುತ್ತದೆ. ಅಷ್ಟೇ ಅಲ್ಲದೆ ನಿವೃತ್ತ ಸಿಬ್ಬಂದಿಯೂ ಐದು ವರ್ಷಗಳವರೆಗೆ ರಾಜ್ಯಪಾಲರ ಚುನಾವಣೆಗೆ ನಿಲ್ಲಕೂಡದು. ಇದು ಸುರಕ್ಷಿತ ವ್ಯವಸ್ಥೆ. ಸರಕಾರಿ ನೌಕರರು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ರಾಜಕೀಯ ಪಕ್ಷಗಳ ಸದಸ್ಯರೂ ಆಗುವಂತಿಲ್ಲ. ರಾಜಕೀಯ ಚಟುವಟಿಕೆಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಸಹಾಯ ನೀಡುವಂತಿಲ್ಲ. ಹಾಗಾಗಿ ರಾಜ್ಯಪಾಲರ ಚುನಾವಣೆಗೆ ನಿಲ್ಲಲೇಕೂಡದು. ನಾನು ಈ ತಿದ್ದುಪಡಿಯನ್ನು ಈಗ ಮಂಡಿಸುತ್ತೇನೆ.

(ಶಿಬ್ಬನ್ ಲಾಲ್ ಸಕ್ಸೇನಾ ಮತ್ತು ಬಿಶ್ವನಾಥ್ ದಾಸ್‌ರವರು ತಿದ್ದುಪಡಿಗಳನ್ನು ಮಂಡಿಸಿಲ್ಲ)

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಅನಂತಶಯನಮ್ ಅಯ್ಯಂಗಾರ್‌ರವರಿಂದ ಮಂಡಿಸಿದ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಶ್ರೀ ದೇಬಿ ಪ್ರಸಾದ್ ಖೈತಾನ್** : ಮಾನ್ಯರೆ, ವಯೋಮಿತಿಯನ್ನೂ ರಾಜ್ಯಪಾಲರ ಹುದ್ದೆಗೆ ನಿಗದಿಪಡಿಸಲಾಗಿದೆ. ಉಪರಾಜ್ಯಪಾಲರ ಹುದ್ದೆಗೂ ವಯೋಮಿತಿಯನ್ನು ನಿಗದಿಪಡಿಸಬಹುದೆ?

(ಉತ್ತರಿಸಲಿಲ್ಲ)

**ಮಾನ್ಯ ಅಧ್ಯಕ್ಷರು** : ತಿದ್ದುಪಡಿ:

"ಕೆಳಗಿನ ೪ನೇ ಖಂಡದ ಉಪಖಂಡ (೨) ಮತ್ತು ಆಗಲೆ ಇರುವ ಖಂಡ ೪ನ್ನು ಖಂಡ ೪(೧) ಎಂದು ಪುನರಂಕಿಸಬೇಕು (renumbered)

"ರಾಜ್ಯಪಾಲರ ಚುನಾವಣೆಗೆ ನಿಲ್ಲುವ ವ್ಯಕ್ತಿ ಕೇಂದ್ರ ಸರಕಾರ ಅಥವಾ ಪ್ರಾಂತ್ಯಗಳ ಸರಕಾರಗಳ ಕಚೇರಿಯಲ್ಲಿ ವೇತನಪಡೆಯುವ ಸಿಬ್ಬಂದಿಯಾಗಿರಕೂಡದು."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು** : ತಿದ್ದುಪಡಿ ಪ್ರಸಾವ

"ಭಾಗ ೪ನ್ನು ತಿದ್ದುಪಡಿಯಂತೆ ಅಂಗೀಕರಿಸಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**ಖಂಡ ೫**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ಮಂಡಿಸುತ್ತೇನೆ.

"ರಾಜ್ಯಪಾಲರ ಚುನಾವಣೆಗೆ ಸಂಬಂಧಿಸಿದ ವಿವಾದಗಳು ಸಂಯುಕ್ತ ಸರಕಾರದ ನಿರ್ಧಾರದಂತೆ ಸರ್ವೋಚ್ಚನ್ಯಾಯಾಲಯದಲ್ಲೆ ತೀರ್ಮಾನವಾಗಬೇಕು."

ನನಗೆ ತಿಳಿದ ಹಾಗೆ ಈ ಖಂಡದಲ್ಲಿ ವಿವಾದಾತ್ಮಕ ವಿಷಯಗಳಿಲ್ಲ ಮತ್ತು ಇದಕ್ಕೆ ಯಾವುದೇ ತಿದ್ದುಪಡಿಗಳಿಲ್ಲ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಈಗ ಸ್ವಲ್ಪ ವಿಶ್ರಾಂತಿಯ ಅಗತ್ಯವಿದೆಯೆನಿಸುತ್ತದೆ ೧/೨ ತಾಸು ಸಮಯ ಚಹಾ – ವಿರಾಮ ನೀಡೋಣವೆ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಅದೂ ಒಂದು ತಿದ್ದುಪಡಿಯೆ? ಸದನದ ಕಲಾಪ ಇನ್ನೂ ಮೂರು ತಾಸುಗಳಷ್ಟು ಸಮಯ ನಡೆಯುತ್ತದೆ. ಸದಸ್ಯರೆಲ್ಲರು ಚಹಾ ಸೇವಿಸಿ ಬರಬಹುದು.

**ಶ್ರೀ ಎಚ್.ವಿ. ಕಾಮತ್** : ಒಂದು ವೇಳೆ ಈಗ ನಾವು ಅರ್ಧ ತಾಸು ಚಹಾ ವಿರಾಮಕ್ಕೆ ಹೋದರೆ ಮುಂದೆ ೬.೩೦ ಗಂಟೆಯವರೆಗೆ ಇರಬಹುದು.

**ಮಾನ್ಯ ಅಧ್ಯಕ್ಷರು** : ಸದನದ ಕಲಾಪಗಳು ಮುಂದುವರಿಯುತ್ತವೆ, ನಡುವೆ ಸದಸ್ಯರು ಚಹಾ ಸೇವಿಸಿ ಬರಬಹುದು.

**ಖಂಡ ೬**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ಮಂಡಿಸುತ್ತೇನೆ.

"೬(೧) ರಾಜ್ಯಪಾಲರು ಪ್ರಾಂತ್ಯಗಳ ವಿಧಾನ ಸಭೆಯ ಸದಸ್ಯರಾಗಿರಕೂಡದು. ಒಂದು ವೇಳೆ ಸದಸ್ಯರಾಗಿದ್ದಲ್ಲಿ ಪ್ರಾಂತೀಯ ವಿಧಾನಸಭೆಯ ಸ್ಥಾನವನ್ನು ತ್ಯಜಿಸಬೇಕು.

(೨) ವೇತನ ಪಡೆಯುವ ನೌಕರಿಯನ್ನು ಕೇಂದ್ರ ಅಥವಾ ಪ್ರಾಂತ್ಯದ ಸರಕಾರಗಳ ಕಚೇರಿಗಳಲ್ಲಿ ನಿರ್ವಹಿಸಬಾರದು.

(೩) ರಾಜ್ಯಪಾಲರಿಗೆ ಸರಕಾರದಿಂದ ನಿವಾಸದ ಸೌಲಭ್ಯ, ಪ್ರಾಂತ್ಯದ ವರಮಾನ ಮತ್ತು ಇತರ ಸೌಲಭ್ಯಗಳು ವಿಧಾನಸಭೆಯ ಕಾಯಿದೆಯ ಪ್ರಕಾರ ನಿಗದಿಮಾಡಲಾಗುತ್ತದೆ.

(೪) ನಿಗದಿ ಮಾಡಲಾದ ವರಮಾನ ಮತ್ತು ಇತರ ಸೌಲಭ್ಯಗಳು ರಾಜ್ಯಪಾಲರ ಅವಧಿ ಮುಗಿಯುವ ವರೆಗೂ ಕಡಿಮೆಯಾಗುವುದಿಲ್ಲ.

ಉಪಖಂಡ(೧)ನ್ನು ತಾವು ಗಮನಿಸಿ, ಅದರಲ್ಲಿರುವ ಅಂಶವೆಂದರೆ, ಒಂದು ವೇಳೆ ವಿಧಾನಸಭೆಯ ಸದಸ್ಯನಾಗಿದ್ದಲ್ಲಿ ರಾಜ್ಯಪಾಲರ ಚುನಾವಣೆಗೆ ನಿಲ್ಲಲು ಇಚ್ಛಿಸಿದಲ್ಲಿ ಅವರು ಸದಸ್ಯತ್ವವನ್ನು ತ್ಯಜಿಸಬೇಕಾಗುತ್ತದೆ. ಬೇರೆ ದಾರಿಯೇ ಇರುವುದಿಲ್ಲ. ಅವರು ತನ್ನಷ್ಟಕ್ಕೆ ತಾನೇ ವಿಧಾನಸಭೆಯಿಂದ ಹೊರಬರುತ್ತಾರೆ. ಇದೇ ಸರಿಯಾದ ಪರಂತುಕವಾದುದರಿಂದ ಚರ್ಚಿಸುವ ಅಗತ್ಯವಿಲ್ಲ.

ಉಪಖಂಡ (೨) ಕಚೇರಿಯ ಅಧಿಕಾರಾವಧಿಗೆ ಸಂಬಂಧಿಸಿದ್ದು ಇದು ಮುಖ್ಯವಾದುದಾಗಿದೆ. ನಾವು ಅನಂತಶಯನಮ್ ಅಯ್ಯಂಗಾರ್‌ರವರಿಂದ ರಾಜ್ಯಪಾಲರ ಅರ್ಹತೆಗೆ ಸಂಬಂಧಿಸಿದಂತೆ ತಿದ್ದುಪಡಿಯನ್ನು ಅಂಗೀಕರಿಸಿದ್ದೇವೆ.

ಉಪಖಂಡ (೩) ಇಲ್ಲಿ ರಾಜ್ಯಪಾಲರ ನಿವಾಸ ವರಮಾನ ಮತ್ತು ಇತರ ಸೌಲಭ್ಯಗಳ ಬಗ್ಗೆ ಅನಾವಶ್ಯಕವಾಗಿ ವಿವರಣೆಯಿರುತ್ತದೆ. ಇದರ ಬಗ್ಗೆ ಏನೂ ಹೇಳುವ ಅಗತ್ಯವಿಲ್ಲ. ಈ ಸೌಲಭ್ಯಗಳನ್ನು ವಿಧಾನಸಭೆಯೇ ನಿರ್ಧರಿಸುತ್ತದೆ.

**ಡಾ. ಪಿ.ಎಸ್. ದೇಶಮುಖ್ :** ನಾನು ಯಾವುದೇ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.

**ಶ್ರೀ ಎಮ್.ಎಸ್. ಅನೆ :** (ದಕ್ಷಿಣ ರಾಜ್ಯಗಳು) : ನಾನು ಈ ಮಂಡನೆಯನ್ನು ಪರಿಶೀಲಿಸಲೇ?

**ಮಾನ್ಯ ಅಧ್ಯಕ್ಷರು :** ಆಗಬಹುದು; ತಿದ್ದುಪಡಿಯನ್ನು ಮಂಡಿಸಿದ ನಂತರದಲ್ಲಿ

**ಶ್ರೀ ಆರ್.ಕೆ. ಸಿಧ್ವಾ :** ನನ್ನ ಹೆಸರಲ್ಲಿರುವ ಆ ತಿದ್ದುಪಡಿಯಲ್ಲಿ ರಾಜ್ಯಪಾಲರ ವರಮಾನದ ನಿಗದಿ ಸಂವಿಧಾನದ ಭಾಗವಾಗಬೇಕು. ನನ್ನ ನಿಲುವೇನೆಂದರೆ, ರಾಜ್ಯಪಾಲರು ಗೌರವ, ಘನತೆಯುಳ್ಳವರಾಗಿರುತ್ತಾರೆ. ಹಾಗಾಗಿ ಅವರ ವೇತನ ಮತ್ತು ಸೌಲಭ್ಯಗಳನ್ನು ಚಂಚಲತೆ ಮತ್ತು ಚಪಲಚಿತ್ತವುಳ್ಳ ಪ್ರಾಂತ್ಯಗಳ ವಿಧಾನಮಂಡಲ ನಿರ್ಧರಿಸುವ ಅಧಿಕಾರವಿರಕೂಡದು. ಸಾರ್ವತ್ರಿಕ ಚುನಾವಣೆಯ ಮೂಲಕ ಅಂದರೆ ವಯಸ್ಕಮತದಾನದ ಮೂಲಕ ಆಯ್ಕೆಗೊಂಡಂತಹ ಸಂದರ್ಭದಲ್ಲಿ ಪ್ರಾಂತ್ಯಗಳಿಗೆ ರಾಜ್ಯಪಾಲರ ವರಮಾನ ಮತ್ತು ಸೌಲಭ್ಯಗಳನ್ನು ನಿಗದಿಪಡಿಸುವ ಅಧಿಕಾರ ಉಚಿತವಲ್ಲ. ಸಂವಿಧಾನವೇ ಅವರ ವೇತನ ಮತ್ತು ಇತರ ಸೌಲಭ್ಯಗಳನ್ನು ನಿಗದಿಪಡಿಸಬೇಕು. ನನ್ನ ವಿವರಣೆಯೇನೆಂದರೆ ಅಸ್ಸಾಮ್‌ನಂತಹ ಚಿಕ್ಕ ಪ್ರಾಂತ್ಯಗಳು ವೇತನವನ್ನು ರಾಜ್ಯಪಾಲರಿಗೆ ನಿಗದಿಪಡಿಸಲಾರವು. ಇದನ್ನು ಪಟ್ಟಿಯಲ್ಲೂ ಸೇರಿಸಬಹುದು. ಈ ಅಧಿನಿಯಮವನ್ನು ಪ್ರಾಂತ್ಯಗಳ ಸಂವಿಧಾನ ಸಮಿತಿಯಲ್ಲೇ ನಿರ್ಧರಿಸಬೇಕು. ನಾನು ತಿದ್ದುಪಡಿಯನ್ನು ಮಂಡಿಸುವುದಿಲ್ಲ. ಆದರೆ ಈ ಅಧಿನಿಯಮದ ಬಗ್ಗೆ ಪ್ರಾಂತ್ಯಗಳ ಸಮಿತಿಯು ಪರಿಗಣಿಸಬೇಕು.

**ಮಾನ್ಯ ಅಧ್ಯಕ್ಷರು :** ಪ್ರಾಂತೀಯ ಸಂವಿಧಾನ ಸಮಿತಿ ಈಗಾಗಲೆ ವರದಿ ಮಾಡಿದೆ. ಈ ಅಂಶ ಮತ್ತೆ ಅದರ ಗಮನಕ್ಕೆ ತರಲ್ಪಡುವುದೋ, ಇಲ್ಲವೋ ತಿಳಿಯದು. ನನಗನಿಸುತ್ತೆ, ಸಂವಿಧಾನ ಅಂತಿಮ ರೂಪು ತಳೆದಾಗ, ಈ ವಿಷಯ ಪರಿಶೀಲನೆಗೆ ಬರಬಹುದೆನಿಸುತ್ತೆ.

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯರೆ, ಹೌದು, ಅದನ್ನು ನೆನಪಿನಲ್ಲಿಡಲಾಗುವುದು ಎಂದು ನನಗೆ ತಿಳಿದುಬಂದಿದೆ.

**ಮಾನ್ಯ ಅಧ್ಯಕ್ಷರು :** ಈ ಖಂಡಕ್ಕೆ ತಿದ್ದುಪಡಿ ಇಲ್ಲದೆ ಇರುವುದರಿಂದ ನಾನು ಅನೆಯವರನ್ನು ಮಾತನಾಡಲು ಕರೆಯುತ್ತಿದ್ದೇನೆ.

**ಶ್ರೀ ಎಮ್.ಎಸ್. ಅನೆ :** ಮಾನ್ಯರೆ, ಈ ಖಂಡದ ಬಗ್ಗೆ ಕೆಲವು ಅಭಿಪ್ರಾಯಗಳನ್ನಷ್ಟೆ ಹೇಳಲಿಚ್ಛಿಸುತ್ತೇನೆ.

ಉಪಖಂಡ (೧)ರಂತೆ ರಾಜ್ಯಪಾಲರು ವಿಧಾನಸಭೆಯ ಸದಸ್ಯರಾಗಿರುವುದಿಲ್ಲ. ಒಂದು ವೇಳೆ

ಸದಸ್ಯರಾಗಿದ್ದಲ್ಲಿ ಮತ್ತು ಚುನಾವಣೆಯಲ್ಲಿ ಆಯ್ಕೆಯಾದಾಗ ಸದಸ್ಯತ್ವನ್ನು ಬಿಡಬೇಕು. ಇದು ಕೇವಲ ರಾಜ್ಯಪಾಲರಿಗಷ್ಟೇ ಸೀಮಿತವಾಗದು, ಉಪರಾಜ್ಯಪಾಲರಿಗೂ ಇದು ಅನ್ವಯಿಸುತ್ತದೆ. ಆದ್ದರಿಂದ ಗೋವಿಂದ ವಲ್ಲಭ ಪಂತ್ ರವರ ತಿದ್ದುಪಡಿಯಲ್ಲಿ ತಿಳಿಸಿದಂತೆ ಉಪರಾಜ್ಯಪಾಲರು ಒಂದು ವೇಳೆ ರಾಜ್ಯಪಾಲರ ಕರ್ತವ್ಯವನ್ನು ನಿಭಾಯಿಸಬೇಕಾದಾಗಲೂ ಇದೇ ನಿಯಮ ಅನ್ವಯಿಸುತ್ತದೆ. ವಿಧಾನಸಭೆಯಲ್ಲಿ ಖಾಲಿಯಾದ ಸದಸ್ಯರ ಜಾಗವನ್ನು ತುಂಬಬೇಕು. ಇದೇ ಈ ತಿದ್ದುಪಡಿಯ ಅಂಶಗಳಾಗಿರುತ್ತದೆ. ಈ ವಿಷಯದಲ್ಲಿ ಸಾಕಷ್ಟು ಯೋಚಿಸಿ ನಿರ್ಣಯಿಸಬೇಕಾಗುತ್ತದೆ.

**ಮಾನ್ಯ ಅಧ್ಯಕ್ಷರು** : ಬೇರೆ ಸದಸ್ಯರು ಯಾರಾದರೂ ಈ ವಿಷಯದ ಬಗ್ಗೆ ಮಾತನಾಡಬೇಕೆ?

**ಶ್ರೀ ನಝಿರುದ್ದೀನ್ ಅಹ್ಮದ್** : *[ಅಧ್ಯಕ್ಷರೆ, ಖಂಡ ೬ನ್ನು ಪರಿಗಣಿಸಲು ನನಗೆ ಸ್ವಲ್ಪ ತೊಡಕುಂಟಾಗ ಬಹುದೆಂದು ಅನಿಸಿದೆ. ಉಪಖಂಡ ಹೇಳುವುದೇನೆಂದರೆ ರಾಜ್ಯಪಾಲರು ವಿಧಾನ ಸಭೆಯ ಸದಸ್ಯರಾಗಿರ ಕೂಡದು. ಒಂದು ವೇಳೆ ಅವರು ಸದಸ್ಯರಾಗಿದ್ದಲ್ಲಿ ಚುನಾವಣೆಯಲ್ಲಿ ಆಯ್ಕೆ ಆದ ತತ್‌ಕ್ಷಣ ಸದಸ್ಯತ್ವವನ್ನು ಬಿಡಬೇಕು. ಹಾಗಿದ್ದಲ್ಲಿ ಉಪಖಂಡ (೨)ನ್ನು ನೋಡಿದಾಗ ರಾಜ್ಯಪಾಲರು ಯಾವುದೇ ಕಚೇರಿಯಲ್ಲಿ ವೇತನ ಪಡೆಯುವ ಕೆಲಸ ನಿರ್ವಹಿಸಬಾರದು. ನಾವು ಆಗಲೇ ಇದಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ಸದನದಲ್ಲಿಟ್ಟಿದ್ದೇವೆ. ಇದರ ಬಗ್ಗೆ ನೋಟೀಸನ್ನು ಕೊಡಲಾಗಿದೆ. ರಾಜ್ಯಪಾಲರ ಹುದ್ದೆಯ ಅಭ್ಯರ್ಥಿ ಸರಕಾರದ ಕಚೇರಿಗಳಲ್ಲಿ ವೇತನವಿರುವ ಕೆಲಸದಲ್ಲಿರಕೂಡದು. ಹಾಗಾಗಿ ಇದು ಸ್ಥಳೀಯ ಸರಕಾರಗಳಿಗೂ ಅನ್ವಯಿಸುವುದರಿಂದ ಈ ಉಪಖಂಡ (೨)ರ ಅಗತ್ಯವಿಲ್ಲ.

ಮಾನ್ಯರೆ, ಮತ್ತೊಂದು ವಿಷಯವೆಂದರೆ, ಯಾರಾದರೂ ಉಪರಾಜ್ಯಪಾಲರಾಗಲು ಆಕಾಂಕ್ಷಿಗಳಾಗಿದ್ದರೆ ಅವರು ವಯಸ್ಕ ಮತದಾನ ಪದ್ಧತಿಯಲ್ಲಿ ಆರಿಸಿ ಬರದಿದ್ದರೂ ಜಾಗ ಖಾಲಿಯಿದ್ದಾಗ ರಾಜ್ಯಪಾಲರ ಕಾರ್ಯನಿರ್ವಹಿಸುತ್ತಾರೆ. ಅಮೆರಿಕಾದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ ಯಾಕಾಗಬಾರದು ಎಂದು ಕೆಲವರು ಪ್ರಶ್ನಿಸಿದ್ದಾರೆ. ಆದರೆ ಅಮೆರಿಕದ ಉಪಾಧ್ಯಕ್ಷರು ಇಡೀ ದೇಶದ ಸಾರ್ವತ್ರಿಕ ಚುನಾವಣೆಯಲ್ಲಿ ಆರಿಸಿ ಬಂದವರಾಗಿರುತ್ತಾರೆ. ಇಲ್ಲಿಯ ಉಪರಾಜ್ಯಪಾಲರು ಕೆಲವೇ ಜನರಿಂದ ಆಯ್ಕೆಯಾದವರಾಗಿದ್ದುದರಿಂದ ಅವರನ್ನು ಅಮೆರಿಕದ ಅಧ್ಯಕ್ಷರಿಗೆ ಹೋಲಿಸುವುದು ಎಷ್ಟು ಸಮಂಜಸ? ಹಾಗಾಗಿ ರಾಜ್ಯಪಾಲರ ಅಧಿಕಾರವನ್ನು ಉಪರಾಜ್ಯಪಾಲರಿಗೆ ಕೊಡಲು ಸಾಧ್ಯವಿಲ್ಲ.

ಮಾನ್ಯರೆ, ಇನ್ನೊಂದು ವಿಷಯವೆಂದರೆ ತಿದ್ದುಪಡಿಯಲ್ಲಿರುವಂತೆ ಪ್ರತಿ ಪ್ರಾಂತ್ಯದಲ್ಲೂ ಉಪರಾಜ್ಯಪಾಲರಿರಬೇಕು. ಈ ಉಪರಾಜ್ಯಪಾಲರಿಗೆ ವೇತನ ಕೊಡಲಾಗುವುದೇ ಅಥವಾ ಗೌರವಾರ್ಥವಾಗಿ ಇರುವರೆ? ಒಂದು ವೇಳೆ ವೇತನವನ್ನು ನಿಗದಿಪಡಿಸಿದಲ್ಲಿ ಅಸ್ಸಾಮ್ ಒರಿಸ್ಸಾದಂತಹ ಬಡ ಪ್ರಾಂತ್ಯಗಳಿಗೆ ಹೊರೆಯಾಗುತ್ತದೆ. ಈ ವಿಷಯಗಳ ಬಗ್ಗೆ ಸೂಕ್ತವಾದ ಉತ್ತರಗಳನ್ನು ನಿರೀಕ್ಷಿಸುತ್ತಿದ್ದೇನೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಮೊದಲೇ ಹೇಳಿದಂತೆ ಈ ಖಂಡಗಳ ಅಂತಿಮ ನಿರ್ಧಾರ ಇನ್ನೂ ಆಗಲಿಲ್ಲ. ಪುನಃ ಈ ಖಂಡಗಳನ್ನು ಕರಡು ಸಮಿತಿಯಲ್ಲಿ ತರಲಾಗುವುದು. ಯಾವುದೇ ಲೋಪಗಳಿದ್ದಲ್ಲಿ ತಿದ್ದಲಾಗುವುದು. ಅನಂತರವೆ ಸದನದಲ್ಲಿ ಇಡಲಾಗುವುದು. ಹೀಗಾದಲ್ಲಿ ಮೂಲಕರಡು ಪ್ರತಿಗೆ ಮೌಲ್ಯ ಕಡಿಮೆಯಾಗದಂತೆ ಈ ತಿದ್ದುಪಡಿಯನ್ನು ಮಂಡಿಸಬೇಕು. ಪ್ರಾಂತ್ಯ ವಿಧಾನಸಭೆಗೆ ರಾಜ್ಯಪಾಲರ ವೇತನವನ್ನು ನಿರ್ಧರಿಸುವ ಹಕ್ಕಿರಕೂಡದು.

**ಶ್ರೀ ಕೆ.ಎಮ್. ಮುನ್ಷಿ** : ಇದನ್ನು ಹಿಂತೆಗೆದುಕೊಳ್ಳಲಾಗಿದೆ.

**ಶ್ರೀ ನಝಿರುದ್ದೀನ್ ಅಮ್ಮದ್** : ಇದು ಒಳ್ಳೆಯ ತಿದ್ದುಪಡಿಯಾಗಿತ್ತು. ಆದರೆ ಈ ವಿಷಯದ ಬಗ್ಗೆ ಮುಂದೆ ಏನೂ ಹೇಳುವ ಅಗತ್ಯವಿಲ್ಲ. ಕರಡು ಸಮಿತಿಯಲ್ಲೆ ಮುಂದೆ ನಿರ್ಧರಿಸಬಹುದು. ಇನ್ನೂ ಕೆಲವು ಮುಖ್ಯವಾದ ಸಂಗತಿಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಆದರೂ ಈ ಸಮಯದಲ್ಲಿ ಅವುಗಳ

ದೀರ್ಘ ಚರ್ಚೆಗೆ ಹೋಗುವುದು ಬೇಡ ಕರಡು ಸಮಿತಿಯೇ ಇದರ ಬಗ್ಗೆ ಸಲಹೆ ನೀಡಲಿ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಈ ಖಂಡದ ಬಗ್ಗೆ ಅನೆಯವರ ಅಭಿಪ್ರಾಯಕ್ಕೆ ಪ್ರತಿಯಾಗಿ ನಾನು ಹೇಳುವುದೇನೆಂದರೆ ರಾಜ್ಯಪಾಲರ ಗೈರುಹಾಜರಿಯಲ್ಲಿ ಮಾತ್ರ ಅವರ ಕಾರ್ಯವನ್ನು ಉಪರಾಜ್ಯಪಾಲರು ನಿರ್ವಹಿಸುತ್ತಾರೆ. ಪಂಡಿತ್ ಗೋವಿಂದವಲ್ಲಭ ಪಂತ್, ಅವರ ತಿದ್ದುಪಡಿಯಲ್ಲಿ ತಿಳಿಸಿರುವಂತೆ. ರಾಜ್ಯಪಾಲರು ಅಕಾಲಿಕ ಮರಣಕ್ಕೆ ತುತ್ತಾದಲ್ಲಿ, ಅಥವಾ ರಾಜೀನಾಮೆ ನೀಡಿದಲ್ಲಿ ಕಚೇರಿಯ ಆದೇಶದಂತೆ ರಾಜ್ಯಪಾಲರ ಆಕಸ್ಮಿಕ ಜಾಗವನ್ನು ಭರ್ತಿಮಾಡುವ ಅಧಿಕಾರವನ್ನು ಉಪರಾಜ್ಯಪಾಲರು ಹೊಂದುತ್ತಾರೆ. ಹಾಗೂ ಆಗ ವಿಧಾನಸಭೆಯ ಸದಸ್ಯತ್ವ ಹೊಂದಿದ್ದಲ್ಲಿ ಮುಂದುವರಿಯುವ ಹಕ್ಕನ್ನು ಹೊಂದಿರುವುದಿಲ್ಲ. ಒಂದು ವೇಳೆ ರಾಜ್ಯಪಾಲರ ಗೈರುಹಾಜರಿಯಲ್ಲಿ ಮಾತ್ರ ಅವರ ಕಾರ್ಯವನ್ನು ಉಪರಾಜ್ಯಪಾಲರು ನಿಭಾಯಿಸುವುದಾದರೆ ವಿಧಾನಸಭೆಯ ಸದಸ್ಯತ್ವ ಬಿಡುವ ಅಗತ್ಯವಿಲ್ಲ.

ಇನ್ನು ಖಂಡ (೨)ಕ್ಕೆ ಸಂಬಂಧಿಸಿದಂತೆ ಹಿಂದಿನ ಸಭಾಪತಿಯವರು, ರಾಜ್ಯಪಾಲರು ಸರಕಾರದ ನೌಕರಿಯಲ್ಲಿದ್ದು ವೇತನ ಪಡೆಯಕೂಡದು ಅಂದರೆ ಸಾರ್ವಜನಿಕ ಸಿಬ್ಬಂದಿ ರಾಜ್ಯಪಾಲರ ಅಭ್ಯರ್ಥಿಯಾಗಲು ಅರ್ಹತೆ ಪಡೆದಿರುವುದಿಲ್ಲ. ಆದ್ದರಿಂದ ಈ ಉಪಭಾಗದ ಆವಶ್ಯಕತೆಯಿಲ್ಲ. ರಾಜ್ಯಪಾಲರ ಅಭ್ಯರ್ಥಿಗೆ ಬೇಕಾಗುವ ಅರ್ಹತೆಗಳು ಮತ್ತು ಚುನಾವಣೆಯ ನಂತರ ರಾಜ್ಯಪಾಲರಾದ ಮೇಲೆ ನೌಕರಿಯಲ್ಲಿ ಮುಂದುವರೆಯುವುದು ಈ ಅಂತರಗಳನ್ನು ಅವರು ಮರೆತಿದ್ದಾರೆ ಎಂದೆನಿಸುತ್ತಿದೆ. ಆದರೆ ಸರಕಾರಿ ನೌಕರಿ ಬಿಟ್ಟನಂತರ ಬೇರೆ ವ್ಯವಹಾರಗಳಿದ್ದಲ್ಲಿ ಮುಂದುವರಿಯಬಹುದು. ಇದರ ಅರ್ಥವೆಂದರೆ ರಾಜ್ಯಪಾಲರಾಗಿ ಕಾರ್ಯನಿರ್ವಹಿಸುವಲ್ಲಿ ಪೂರ್ಣಾವಧಿಯಲ್ಲಿರಬೇಕು ಎಂಬ ಉದ್ದೇಶವೇ ಆಗಿರುತ್ತದೆ. ಆ ಕಾರಣದಿಂದಲೆ ಈ ಉಪಖಂಡ ರೂಪಿತವಾಗಿದೆ.

ಇನ್ನು ಉಪಖಂಡ (೪) ಪದೇ ಪದೇ ರಾಜ್ಯಪಾಲರ ವೇತನ ಮತ್ತು ಸೌಲಭ್ಯಗಳ ಬದಲಾವಣೆಗಳನ್ನು ವಿಧಾನಸಭೆಯು ವಿರೋಧಿಸುತ್ತದೆ. ಏನೇ ಆಗಲಿ ನಾನು ಪದ 'ಬದಲಾವಣೆ' ಬದಲಿಗೆ 'ಕಡಿಮೆಯಾಗುವುದು' ಈ ಪದವನ್ನು ಪ್ರತಿಯೋಜಿಸಬೇಕಾಗಿ ಕೋರುತ್ತೇನೆ.

ಈ ಭಾಗ ಅದು ಇರುವಂತೆಯೇ ಅಂಗೀಕರಿಸಬೇಕು.

**ಮಾನ್ಯ ಅಧ್ಯಕ್ಷರು :** ನಾನು ಈ ತಿದ್ದುಪಡಿಯನ್ನು ಬಹುಮತಕ್ಕೆ ಇಡುತ್ತಿದ್ದೇನೆ. ತಿದ್ದುಪಡಿಯನ್ನು ಮಂಡಿಸಲಾಗಿಲ್ಲ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ ೭

**ಗೌರವಾನ್ವಿತ ಸರ್ದಾರ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತಿದ್ದೇನೆ.

'೭' ಪ್ರಾಂತ್ಯಗಳ ರಾಜ್ಯಪಾಲರ ಕಾರ್ಯವು, ಅವರಿಂದ ನೇರವಾಗಿ ನಿರ್ವಹಿಸಲ್ಪಡುವುದು ಅಥವಾ ಅವರ ಕೆಳಗಿನ ಅಧಿಕಾರಿಗಳಿಂದಲೇ ಇರಬಹುದು ಆದರೆ ಇದು ಸಂಯುಕ್ತ ಸಂಸತ್ತಿಗೆ ಅಡ್ಡಿಯಾಗದು. ಪ್ರಾಂತ್ಯಗಳ ಶಾಸನಸಭೆ ಅಥವಾ ಅಧೀನ ಅಧಿಕಾರಿಗಳೂ ಕೂಡಿ ನಿರ್ವಹಿಸುವ ಕಾರ್ಯನಿರ್ವಹಣೆಗೆ ರಾಜ್ಯಪಾಲರು ಅಥವಾ ಅಧೀನಾಧಿಕಾರಿಗಳ ಹಸ್ತಕ್ಷೇಪವಿರುವುದಿಲ್ಲ.

ಈ ಪ್ರಸ್ತಾವದ ಅಂಗೀಕಾರಕ್ಕಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ಶ್ರೀ ಅನಂತಶಯನಮ್ ಅಯ್ಯಂಗಾರ್ ನಿಮ್ಮ ತಿದ್ದುಪಡಿಯಿದೆಯೆ?

**ಶ್ರೀ ಎಂ. ಅನಂತ ಶಯನಮ್ ಅಯ್ಯಂಗಾರ್ :** ನಾನು ಈಗ ಅದನ್ನು ಮಂಡಿಸುವುದಿಲ್ಲ. ಬೇರೆ ಭಾಗ ಮಂಡಿಸುವಾಗ ಅದರ ಬಗ್ಗೆ ಮಾತನಾಡಲು ಕಾಯ್ದಿರಿಸಿದ್ದೇನೆ.

**ಶ್ರೀ ಬಿಶ್ವನಾಥ್ ದಾಸ್** : ಮಾನ್ಯರೆ, ನಾನು ಮಂಡಿಸುತ್ತೇನೆ.

ಖಂಡ ೭ಕ್ಕೆ ಕೆಳಗಿನ ಪರಂತುಕವನ್ನು ಸೇರಿಸಬೇಕು.

"ಸಂಯುಕ್ತ ಶಾಸನಸಭೆಯ ಪರವಾಗಿ ಕೆಲವು ಕಾರ್ಯಕ್ರಮಗಳನ್ನು ನಿರ್ವಹಿಸಲು ಅವಕಾಶ ಒದಗಿಸುವ ಬಗ್ಗೆ"

ಇದು ಅಚಾತುರ್ಯದಿಂದಾಗಿ ಬಿಟ್ಟಿರುವ ಒಂದು ಸಾಧಾರಣ ತಿದ್ದುಪಡಿಯಾಗಿರುತ್ತದೆ. ಸದನದ ಗೌರವಾನ್ವಿತ ಸದಸ್ಯರಿಗೆ ತಿಳಿದಿರುವಂತೆ ಪ್ರಾಂತ್ಯಗಳು ಮತ್ತು ಸಂಯುಕ್ತ ಸಂವಿಧಾನಗಳು ಅವುಗಳದ್ದೇ ಆದ ಕಾರ್ಯನಿರ್ವಹಣೆ ಮತ್ತು ಜವಾಬ್ದಾರಿಯನ್ನು ನಿರೂಪಿಸಿರುತ್ತದೆ. ಪ್ರಸ್ತುತ ಖಂಡದಲ್ಲಿ ಸಂಯುಕ್ತ ಸಂವಿಧಾನವು ಪ್ರಾಂತ್ಯಗಳ ಕಾರ್ಯಾಂಗವನ್ನು ಅವುಗಳ ಸಾಮಾನ್ಯ ಕಾರ್ಯನಿರ್ವಹಣೆಗಿಂತ ಹೆಚ್ಚುವರಿ ಕೆಲಸ ನಿರ್ವಹಿಸಲು ಆದೇಶಿಸುವ ಅಧಿಕಾರ ಹೊಂದಿರುತ್ತವೆ. ಇಂತಹ ಸಂದರ್ಭದಲ್ಲಿ ಸಂಯುಕ್ತ ಸರಕಾರವು ಪ್ರಾಂತ್ಯಗಳ ಅಧಿಕಾರಿಗಳಿಗೆ ಹೆಚ್ಚುವರಿ ವೇತನ ಸೌಲಭ್ಯಗಳನ್ನು ಸಂಯುಕ್ತ ಸಂಸತ್ತಿನ ಪರವಾಗಿ ಕಾರ್ಯನಿರ್ವಹಿಸಿದ್ದಕ್ಕೆ ಕೊಡಬೇಕು.

ಎರಡನೆಯದಾಗಿ ಸಂಯುಕ್ತ ಶಾಸನಸಭೆ ತನ್ನ ಕಾರ್ಯನಿರ್ವಹಣೆಯನ್ನು ಅಗತ್ಯ ವೆಚ್ಚದಿಂದ ಪೂರೈಸುವ ಕಾರ್ಯನಿರ್ವಾಹಕ ಏಜೆನ್ಸಿಯನ್ನು ನಿಯಮಿಸುವವರೆಗೆ ಅದರ ಜವಾಬ್ದಾರಿ ಪೂರ್ತಿಯಾಗದು. ಅದು ಸಂಯುಕ್ತ ಸಂಸತ್ತು ವಹಿಸಿದ ಕಾರ್ಯ ಇರಬಹುದು. ಅಂತಹ ಸಂದರ್ಭಗಳಲ್ಲಿ, ಅದರ ಮುಖ್ಯಸ್ಥರು, ಕಾರ್ಯನಿರ್ವಹಿಸಿದ ಏಜೆನ್ಸಿಗೆ ವೇತನ ನೀಡಬೇಕು. ಆದುದರಿಂದ ನಾವೀಗ, ಏಕರೂಪಿ ಮಾದರಿಗೆ ಬದಲಾಗಿ ಸಂಯುಕ್ತ ಸರ್ಕಾರ ವ್ಯವಸ್ಥೆಯನ್ನು ಪ್ರತಿಯೋಜಿಸುತ್ತಿದ್ದೇವೆ. ನಾನು ಈ ಹೆಚ್ಚುವರಿ ಪಾರುಪತ್ಯ ಅಥವಾ ಜವಾಬ್ದಾರಿ ವಹಿಸಿದ ಕೆಲಸಗಳಿಗೆ ವೇತನವನ್ನು ನೀಡಬೇಕು ಎಂದು ಅಭಿಪ್ರಾಯಪಡುತ್ತೇನೆ.

**ಮಾನ್ಯ ಅಧ್ಯಕ್ಷರು** : ಖಂಡ ೭ ಮತ್ತು ಅದರ ತಿದ್ದುಪಡಿಯನ್ನೂ ಮಂಡಿಸಲಾಗಿದೆ. ಮೂಲಪ್ರಸ್ತಾವ ಮತ್ತು ತಿದ್ದುಪಡಿಯ ಬಗ್ಗೆ ಮುಕ್ತಚರ್ಚೆಗೆ ಅವಕಾಶವಿದೆ. ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು.

**ಶ್ರೀ ಅಜಿತ್ ಪ್ರಸಾದ ಜೈನ್** (ಒಕ್ಕೂಟ ಪ್ರಾಂತ್ಯಗಳು : ಸಾಮಾನ್ಯ) : ಪ್ರಸ್ತುತ ಭಾಗದಲ್ಲಿರುವಂತೆ ಪ್ರಾಂತ್ಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು ರಾಜ್ಯಪಾಲರ ನೇರ ಆದೇಶದಂತೆ ಅಥವಾ ಅಧೀನ ಅಧಿಕಾರಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ ಕೇಂದ್ರ ಸಂವಿಧಾನ ಸಮಿತಿಯ ಶಿಫಾರಸಿನಿಂದ ಬಂದ ಸಂವಾದಿ ಖಂಡವಿದೆ. ಅದರಲ್ಲಿರುವಂತೆ, "ಈ ಸಂವಿಧಾನ ಸಮಿತಿಯ ಉಪಬಂಧಗಳು ಹೆಚ್ಚು ಕಡಿಮೆ ಭಾರತ ಸರಕಾರದ ೩೫ನೇ ಅಧಿನಿಯಮವನ್ನು ಅನುಸರಿಸಿ ರಚಿಸಲ್ಪಟ್ಟಿರುತ್ತವೆ. ಮತ್ತು ಅದಕ್ಕೆ ಕಾರಣವೂ ಇದೆ. ಭಾರತ ಸರಕಾರದ ೩೫ನೇ ಅಧಿನಿಯಮದಂತೆ ಕೆಲವು ಸೇವೆಗಳು ರಾಜ್ಯ ಸರಕಾರದ ಕಾರ್ಯದರ್ಶಿಯ ಅಧೀನದಲ್ಲಿ, ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಪದವಿನ್ಯಾಸಗಳೇ ಶಾಶ್ವತವಾಗಿ ಇರಬೇಕೆಂದೇನೂ ಇಲ್ಲ. ಆದರೆ ಕೇಂದ್ರ ಸಂವಿಧಾನದ ಶಿಫಾರಸು ಬಹಳ ಸರಳವಾಗಿದೆ. ಮತ್ತು ಇನ್ನೂ ಉತ್ತಮ ರೀತಿಯ ಪದಗಳನ್ನು ಬಳಸುವುದೊಳಿತು ಎಂಬುದು ನನ್ನ ವಿಚಾರವಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್** : ಸಂಯುಕ್ತ ಶಾಸನಸಭೆಯ ಕಾರ್ಯನಿರ್ವಹಣೆಯ ಪರವಾಗಿ ಬಿಶ್ವನಾಥ್ ದಾಸ್ ರವರ ಒಂದೇ ಒಂದು ತಿದ್ದುಪಡಿಯಿರುತ್ತದೆ. ಈ ವಿಷಯದ ತಪ್ಪುತಿಳಿವಳಿಕೆಯ ಬಗ್ಗೆ ನನಗೆ ಗೊಂದಲವುಂಟಾಗಿದೆ. ಕಾರ್ಯಾಚರಣೆ ಸಂಯುಕ್ತ ಅಧಿಕಾರಕ್ಕೆ ಸಂಬಂಧಿಸಿದ್ದು ಎಂದು ಅವರ ಅಭಿಪ್ರಾಯವಾಗಿದೆ. ಖಂಡದ ಮುಖ್ಯ ಉದ್ದೇಶ ಪ್ರಾಂತ್ಯಗಳ ಕಾರ್ಯನಿರ್ವಹಣಾ ಅಧಿಕಾರವು. ರಾಜ್ಯಪಾಲರಿಂದ ನೇರವಾಗಿ ಅಥವಾ ಅವರ ಅಧೀನದಲ್ಲಿರುವ ಅಧಿಕಾರಿಗಳಿಂದ ನಿರ್ವಹಿಸಲ್ಪಡುತ್ತದೆ. ಸಂಯುಕ್ತ ಅಧಿಕಾರವು ಕೇವಲ ವೇತನ ಜಾರಿಗೆ ತರುವಲ್ಲಿ ಸಂಬಂಧಪಟ್ಟದ್ದಾಗಿರುತ್ತದೆ. ಇದು ತಿದ್ದುಪಡಿಗೆ ತೀವ್ರತೆ ತಂದಿರುವ ಖಂಡದ ವಿವರಣೆಯ ತಪ್ಪುತಿಳಿವಳಿಕೆಯಿಂದಾಗಿದೆ. ಮುಂದೆ ಜೊತೆಗೆ ಇದೊಂದು ವಿವಾದಾತೀತ ಖಂಡ. ಸದನವು ಇದನ್ನು ಅಂಗೀಕರಿಸುವುದೆಂದು ನಂಬಿದ್ದೇವೆ.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿಯ ೭ನೇ ಭಾಗವನ್ನು ಮಂಡಿಸಲಾಗಿದೆ.

ಪ್ರಶ್ನೆ : ತಿದ್ದುಪಡಿ ಹೀಗಿದೆ:

"ಖಂಡ ೭ಕ್ಕೆ ಕೆಳಗಿನ ಪರಂತುಕವನ್ನು ಸೇರಿಸಬೇಕಿದೆ."

"ಪರಂತು ಸಂಯುಕ್ತ ಶಾಸನಸಭೆಯು ಅದರ ಪರ ಕಾರ್ಯನಿರ್ವಹಣೆಗೆ ತನ್ನ ಕೊಡುಗೆ ನೀಡುತ್ತದೆ."

ತಿದ್ದುಪಡಿಯನ್ನು ನಿರಾಕರಿಸಲಾಗಿದೆ.

**ಮಾನ್ಯ ಅಧ್ಯಕ್ಷರು :** ನಾನು ಈಗ ಇದರ ಮೂಲಖಂಡವನ್ನೇ ಮಂಡಿಸುತ್ತೇನೆ.

"ಪ್ರಾಂತ್ಯದ ಕಾರ್ಯಾಂಗ ಅಧಿಕಾರವನ್ನು ರಾಜ್ಯಪಾಲರು ನೇರವಾಗಿ ಅಥವಾ ಅವರ ಅಧೀನ ಅಧಿಕಾರಿಗಳ ಮೂಲಕ ಚಲಾಯಿಸುತ್ತಾರೆ. ಆದರೆ ಸಂಯುಕ್ತ ಸಂಸತ್ತಾಗಲಿ, ಪ್ರಾಂತೀಯ ಶಾಸನ ಸಭೆಯಾಗಲಿ, ಅಧೀನ ಅಧಿಕಾರಿಗಳಿಗೆ ಪ್ರಕಾರ್ಯಗಳನ್ನು ವಹಿಸಿಕೊಡಲು ಇದು ಅಡ್ಡಿ ಬರುವುದಿಲ್ಲ. ಅಥವಾ ಚಾಲ್ತಿಯಲ್ಲಿರುವ ಭಾರತದ ಕಾನೂನು, ಈ ಪ್ರಕಾರ್ಯಗಳು ರಾಜ್ಯಪಾಲರಿಗೆ ವರ್ಗಾವಣೆಯಾದಂತೆ ಪರಿಗಣಿಸಬೇಕೆಂದು, ಯಾವುದೇ ನ್ಯಾಯಾಲಯ ನ್ಯಾಯಾಧೀಶರು, ಅಧಿಕಾರಿ ಅಥವಾ ಸ್ಥಳೀಯ ಯಾ ಇತರ ಪ್ರಾಧಿಕಾರವನ್ನು ಆದೇಶಿಸುವಂತಿಲ್ಲ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತೇನೆ.

೮, ಈ ಸಂವಿಧಾನದಲ್ಲಿ ವಿಶೇಷ ಒಪ್ಪಂದಕ್ಕೆ ಸಂಬಂಧಿಸಿದ ಬದ್ಧವಾಗಿ ಉಪಬಂಧಗಳಿಗೆ ಪ್ರತಿ ಪ್ರಾಂತ್ಯಗಳ ಕಾರ್ಯ ನಿರ್ವಾಹಕ ಅಧಿಕಾರವನ್ನು ಪ್ರಾಂತೀಯ ಶಾಸನಸಭೆಗಳಿಗೆ ವಿಸ್ತರಿಸಿ ಅವುಗಳಿಗೆ ವಿಧೇಯಕ ಜಾರಿಗೆ ತರುವ ಅಧಿಕಾರ ನೀಡಬೇಕು.

**ಟಿಪ್ಪಣಿ :** ವಿಶೇಷ ಒಪ್ಪಂದಕ್ಕೆ ಸಂಬಂಧಿಸಿದಂತೆ ಈ ಉಪಬಂಧ ಕೆಲವು ವಿವರಣೆ ನೀಡಬೇಕು. ಭವಿಷ್ಯದಲ್ಲಿ ಅಥವಾ ಮುಂಬರುವ ದಿನಗಳಲ್ಲಿ ಭಾರತದ ರಾಜ್ಯಗಳಿರಬಹುದು ಅಥವಾ ಭಾರತ ರಾಜ್ಯಗಳ ಒಕ್ಕೂಟವಿರಬಹುದು. ಕೆಲವು ಸಾಮಾನ್ಯ ಹಿತಾಸಕ್ತಿಯುಳ್ಳ ನಿರ್ದಿಷ್ಟ ವಿಷಯಗಳಲ್ಲಿ ಸಾಮಾನ್ಯ ಆಡಳಿತ ಜಾರಿಗೆ ಬರುವ ಸಾಧ್ಯತೆಯಿರುತ್ತದೆ. ಇಂತಹ ವಿಷಯದಲ್ಲಿ ವಿಶೇಷ ಒಪ್ಪಂದಕ್ಕೆ ಸಂಬಂಧಿಸಿದಂತೆ ಅಧಿನಿಯಮಗಳನ್ನು ಪ್ರಾಂತ್ಯಗಳ ಅಧಿಕಾರ ವ್ಯಾಪ್ತಿಗೆ ಬಿಟ್ಟುಕೊಡಬೇಕಾಗುತ್ತದೆ. ಇದರಲ್ಲಿ ಪ್ರತ್ಯೇಕವಾಗಿ ಏನು ಹೇಳಬೇಕಾಗುತ್ತದೆ. ಇದರಲ್ಲಿ ಪ್ರತ್ಯೇಕವಾಗಿ ಏನು ಹೇಳಬೇಕಾಗಿಲ್ಲ. ರಾಜ್ಯಗಳು ಸಂಯುಕ್ತ ಸರಕಾರದ ವ್ಯಾಪ್ತಿಗೇ ಬರುತ್ತವೆ. ಸಂಯುಕ್ತ ಸರಕಾರದ ವ್ಯಾಪ್ತಿಗೆ ಬರುವ ವಿಷಯಗಳ ಬಗ್ಗೆ ಮತ್ತು ಪ್ರಾಂತೀಯ ಸರಕಾರ ವಿಷಯಗಳ ಬಗ್ಗೆಯೂ ಯೋಚಿಸಬೇಕು.

ಇದನ್ನೂ ಸದನದ ಅಂಗೀಕಾರಕ್ಕೆ ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ಶ್ರೀ ಸಂತಾನಮ್ ನೀವು ಒಂದು ತಿದ್ದುಪಡಿಯ ನೋಟೀಸನ್ನು ಕೊಟ್ಟಿರುವಿರಿ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಈ ಖಂಡವನ್ನು ಸಂಪೂರ್ಣವಾಗಿ ಪರಿಗಣಿಸಬೇಕು. ಮುಖ್ಯ ಖಂಡಕ್ಕೆ ಸಂಬಂಧಿಸಿದಂತೆ ಅರ್ಥಾತ್ ಪ್ರತಿ ಪ್ರಾಂತ್ಯಗಳ ಕಾರ್ಯಗಳಿಗೂ ಶಾಸನಗಳನ್ನು ಜಾರಿಗೆ ತರುವಂತೆ ಕಾರ್ಯನಿರ್ವಾಹಕ ಅಧಿಕಾರವನ್ನು ವಿಸ್ತರಿಸಬೇಕು. ಇದಕ್ಕೆ ಯಾವುದೇ ಆಕ್ಷೇಪಣೆಯಿರಕೊಡದು.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಿದ ನಂತರ ಪುನಃ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡವಲ್ಲವೆ?

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ನಾನು ಈ ಭಾಗದ ಮಂಡನೆಯನ್ನು ನಾಳೆಗೆ ಮುಂದೂಡುತ್ತಿದ್ದೇನೆ. ನಾಳೆ ಸಾಧ್ಯವಾದಲ್ಲಿ ಇದರ ಬಗ್ಗೆ ಚರ್ಚಿಸಬಹುದು.

**ಮಾನ್ಯ ಅಧ್ಯಕ್ಷರು :** ಸಾಧ್ಯವಾಗಬಹುದು ಆದರೆ ನನ್ನ ವಿಚಾರವೆಂದರೆ, ತಿದ್ದುಪಡಿಗಳನ್ನು ಮಂಡಿಸಿದ ಅನಂತರ ಮುಖ್ಯ ಖಂಡದ ಬಗ್ಗೆ ಮತ್ತು ಅವುಗಳ ತಿದ್ದುಪಡಿಗಳ ಬಗ್ಗೆ ಗಣನೆಗೆ ತೆಗೆದುಕೊಳ್ಳುವುದೊಳಿತು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಕೆಲವು ಅಭಿಪ್ರಾಯಗಳನ್ನು ಕಾಯ್ದಿರಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಹೌದು

**ಶ್ರೀ ಕೆ. ಸಂತಾನಮ್ :** ನಾನು ಮಂಡಿಸಲು ವಿನಂತಿಸುತ್ತೇನೆ.

"೮ನೇ ಖಂಡದ ವಿಶೇಷ ಒಪ್ಪಂದಕ್ಕೆ ಸಂಬಂಧಿಸಿದ 'ಉಪಬಂಧಗಳು' ಎಂಬ ಪದಗಳ ಬದಲಿಗೆ ಕೆಳಗೆ ಕಂಡಂತೆ ಪ್ರತಿಯೋಜಿಸಬೇಕು."

"ಸಂವಿಧಾನದ ಷರತ್ತುಗಳಿಗನುಗುಣವಾಗಿ ಈ ವಿಷಯದ ವಿಸ್ತರಣೆಯನ್ನು ಮಾಡಬಹುದು."

ಮಾನ್ಯರೆ, ಶ್ರೀ ಅಲ್ಲಾದಿಯವರು ಆಗಲೇ ವಿವರಿಸಿದಂತೆ, ಸಾಮಾನ್ಯವಾಗಿ ಪ್ರತಿ ಪ್ರಾಂತ್ಯವೂ ಅದರ ಪರಿಮಿತಿಯಲ್ಲಿಯೇ ಶಾಸನಗಳನ್ನು ಮಾಡುವ ಮತ್ತು ವಿಸ್ತರಿಸುವ ಅಧಿಕಾರ ಹೊಂದಿರುತ್ತದೆ. ನನ್ನ ತಿದ್ದುಪಡಿಯ ಅಂಶವೆಂದರೆ ವಿಸ್ತರಣೆ ಪ್ರಾಂತ್ಯಗಳ ಸ್ವಾಮ್ಯದಲ್ಲಿರಬಾರದು. ಅದು ವಿಶೇಷವಾಗಿ ಸಂಯುಕ್ತ ಸಂವಿಧಾನದಡಿಯಲ್ಲಿರಬೇಕು. ಕೇವಲ ಪ್ರಾಂತ್ಯಗಳಿಗೆ ಶಾಸನಾಧಿಕಾರ ಮತ್ತು ಕಾರ್ಯಾಧಿಕಾರದ ವಿಸ್ತರಣೆಯನ್ನು ಹೇಗೆ ನೀಡಲು ಸಾಧ್ಯವಾಗುತ್ತದೆ. ಇದರಿಂದ ಇಡೀ ಕೇಂದ್ರಾಡಳಿತ ಗೊಂದಲಕ್ಕೀಡಾಗುತ್ತದೆ. ನಿರ್ದಿಷ್ಟ ಮಂತ್ರಿಮಂಡಲವೇ ಇದನ್ನು ತಡೆಯಲಾಗದು. ಆದ್ದರಿಂದ ಸಂವಿಧಾನದಿಂದ ಈ ವಿಸ್ತರಣೆಗೆ ನಿರ್ಬಂಧ ಹೇರಲೇಬೇಕು. ಮತ್ತು ವಿಸ್ತರಣೆಯು ಸಂವಿಧಾನದ ಅಧಿನಿಯಮಕ್ಕೊಳಪಟ್ಟಿರಬೇಕು. ಈ ಮುಖ್ಯವಾದ ವಿಚಾರಗಳೇ ನನ್ನ ತಿದ್ದುಪಡಿಯಲ್ಲಿರುತ್ತವೆ. ಒಂದು ವೇಳೆ ಶ್ರೀ ಅಲ್ಲಾದಿಯವರ ಸಲಹೆಯಂತೆ ಇದನ್ನು ಮುಂದಕ್ಕೆ ಹಾಕಿ ಇನ್ನೂ ಉತ್ತಮ ಕರಡು ಸಲ್ಲಿಸಿದ್ದಲ್ಲಿ ನನ್ನ ವಿರೋಧವೇನಿಲ್ಲ. ನಾನು ಬಯಸುವುದೇನೆಂದರೆ ಈ ಭಾಗ ಇದ್ದಂತೆಯೇ ಇರಕೂಡದು. ಇದ್ದಲ್ಲಿ, ಪ್ರಾಂತ್ಯಗಳು ನೆರೆಯ ರಾಜ್ಯಗಳೊಡನೆ ಒಪ್ಪಂದಮಾಡಿಕೊಂಡು ಸಂಯುಕ್ತ ಸರಕಾರದ ಒಪ್ಪಿಗೆ ಪಡೆಯದೆ ಇರಬಹುದು. ಇದರಿಂದ ಕೇಂದ್ರ ಸಂಯುಕ್ತ ಸರಕಾರಕ್ಕೆ ತೊಡಕುಂಟಾಗುತ್ತದೆ. ಏನೇ, ಆಗಲಿ ಸಂಯುಕ್ತ ಶಾಸನಸಭೆಯ ಅಧೀನದಲ್ಲಿದ್ದು ಕೇಂದ್ರ ಸರಕಾರದಿಂದ ದೃಢೀಕರಿಸಲ್ಪಡಬೇಕು. ಈ ಮುಖ್ಯಾಂಶಗಳು ನನ್ನ ತಿದ್ದುಪಡಿಯಲ್ಲಿವೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಕರಡು ಈಗಾಗಲೇ ಸಿದ್ಧವಾಗಿದೆ. ಶ್ರೀ ಸಂತಾನಮ್‌ರವರ ತಿದ್ದುಪಡಿಯು ನಿರುಪದ್ರವಿ ತಿದ್ದುಪಡಿಯಾಗಿರುತ್ತದೆ. ನೀವು ಏನೇ ಒಪ್ಪಂದ ಅಥವಾ ಉಪಬಂಧ ಮಾಡಬಹುದು ಅದು ಪ್ರಶ್ನೆಗೆ ಎಡೆಮಾಡದು, ಅದಕ್ಕೆ ವಿರೋಧವೂ ಇರಲಾರದು. ಏಕೆಂದರೆ ಅದು ಯಾವುದೇ ನಿರ್ದಿಷ್ಟ ತತ್ತ್ವಕ್ಕೆ ಕಟ್ಟುಬಿದ್ದಿಲ್ಲ. ಆದರೆ ವಸ್ತುಶಃ ಸಮಸ್ಯೆಯನ್ನು ಎದುರಿಸಬೇಕೆಂಬುದೇ ಗುರಿಯಾಗಿದ್ದರೆ, ರಾಜ್ಯಗಳೊಂದಿಗಿರುವ ಒಪ್ಪಂದದ ಮೇರೆಗೆ, ಅಥವಾ ಯಾವುದೇ ಮಂಜೂರಾತಿಗೆ ಒಳಪಟ್ಟು, ಪ್ರಾಂತೀಯ ಕಾರ್ಯಾಂಗ ಆಡಳಿತ ನಿರ್ವಹಿಸಲು ಅನುವು ಮಾಡಿಕೊಡಬೇಕೆಂಬುದಾಗಿದ್ದರೆ, ವಿಶೇಷ ಅವಕಾಶ ಕಲ್ಪಿಸಬೇಕಾಗುತ್ತದೆ. ತಾವು ಅನುಮತಿಸಿದರೆ, ಈ ತಿದ್ದುಪಡಿಯನ್ನು ಮಂಡಿಸುತ್ತೇನೆ. ಏನೇ ಆಗಲಿ ನನ್ನ ನಿಲುವನ್ನು ಸ್ಪಷ್ಟಪಡಿಸುತ್ತೇನೆ. (ಪ್ರಸ್ತಾವ ಮಂಡಿಸಲಿ ಬಿಡಲಿ ನನ್ನ ಟಿಪ್ಪಣಿಯ ತಿರುಳಿಗನ್ವಯಿಸುವಂತೆ ಸ್ಪಷ್ಟೀಕರಣ ನೀಡುತ್ತೇವೆ).

**ಮಾನ್ಯ ಅಧ್ಯಕ್ಷರು :** ನಾನು ನಿಮಗೊಂದು ಅವಕಾಶ ನೀಡುತ್ತಿದ್ದೇನೆ. ಇನ್ನೂ ಹೆಚ್ಚಿನ ತಿದ್ದುಪಡಿಗಳಿವೆ. ಅವುಗಳೆಲ್ಲವೂ ಮಂಡನೆಯಾಗಬೇಕಾಗಿದೆ. ನಿಮಗೂ ಒಂದು ಅವಕಾಶ ನೀಡುವೆ.

**ಶ್ರೀ ಗೋಕುಲ್ ಭಾಯಿ ಭಟ್** (ಪೂರ್ವ ರಜಪೂತ ರಾಜ್ಯಗಳ ಗುಂಪು) : ಅಧ್ಯಕ್ಷರೆ, ೮ನೇ ಖಂಡಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ ಒಂದು ಕಡೆ ಈ ಭಾಗ ವಿವರಿಸುವ ವಿಷಯವೆಂದರೆ "ಕೆಲವು ವಿಷಯಗಳಲ್ಲಿ ಆಳುವವರು ಆವಶ್ಯವಿದ್ದಲ್ಲಿ ಪ್ರಾಂತ್ಯಗಳಿಗೇ ಅಧಿಕಾರ ಬಿಟ್ಟುಕೊಡಬೇಕು." ಎಲ್ಲಿ

'ಆಳುವವರು' ಎಂಬ ಪದವಿರುತ್ತದೆಯೋ ಅಲ್ಲಿ 'ರಾಜ್ಯ' ಎಂದು ಬದಲಾವಣೆಯಾಗಬೇಕು. ಆಗಲೆ 'ರಾಜ್ಯ' ಎಂದು ಖಂಡದಲ್ಲಿ ನಮೂದಿಸಲಾಗಿದೆ. ಯಾವಾಗ ರಾಜ್ಯಗಳಿಗೆ ಕೆಲವು ಜವಾಬ್ದಾರಿ ವಹಿಸಲಾಗುವುದೋ ಅಲ್ಲಿ 'ಆಳುವವರು' ಎಂಬ ಪದ ಇರಬಾರದು. ಇದರ ಬಗ್ಗೆ ಆಲೋಚಿಸಿದಾಗ ಜನರೇ ಆಳುವವರು ಮತ್ತು ಆಳಲ್ಪಡುವವರೂ ಆಗಿರುತ್ತಾರೆ. ನನ್ನ ತಿದ್ದುಪಡಿಯ ಉದ್ದೇಶವೂ ಇದೇ ಆಗಿದೆ. ಸರ್ದಾರ್ ಪಟೇಲ್ ರವರು ಇದನ್ನು ವಿರೋಧಿಸಲಾರರು ಎಂದುಕೊಳ್ಳುತ್ತೇನೆ. ಎಲ್ಲಿ ರಾಜ್ಯ ಎಂಬ ಪ್ರತಿಷ್ಠಿತ ಪದವಿರುವುದೋ ಅಲ್ಲಿ 'ಆಳುವವರು' ಎಂಬ ಪದದ ಅಗತ್ಯವಿಲ್ಲ.

**ಶ್ರೀ ಗೋಪಾಲಕೃಷ್ಣ ವಿಜಯವರ್ಗೀಯ :** (ಗ್ವಾಲಿಯರ್) ಗೋಕುಲಭಾಯಿ ಭಟ್ ರವರಿಂದ ಮಂಡಿಸಲಾದ ತಿದ್ದುಪಡಿಯು ತಿಳಿಸಿದಂತೆ* *['ಆಳುವವರು' ಬದಲಿಗೆ 'ರಾಜ್ಯ' ಎಂಬ ಪದದ ಪ್ರತಿಯೋಜನೆ ಸಮಂಜಸವಾಗಿದೆ ಮತ್ತು ಅದನ್ನು ಅಂಗೀಕರಿಸಬೇಕು']*

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ಇದು ಒಂದು ಸಾಮಾನ್ಯ ವಿಷಯವಾಗಿದ್ದರೂ ಸಂಬಂಧವಿದೆ ಮತ್ತು ನಾನು ಅದನ್ನು ಬೆಳಕಿಗೆ ತರಲು ಇಚ್ಛಿಸುತ್ತೇನೆ. ಭಟ್ ರವರ ತಿದ್ದುಪಡಿ ಖಂಡ ೮ಕ್ಕೆ ಸೇರಿದ ಸಂಗತಿಗೆ ಸಂಬಂಧಿಸಿದೆ. ಇದರ ಬಗ್ಗೆ ನೋಟೀಸು ಇದೆಯೆ? ತಿದ್ದುಪಡಿಯನ್ನು ಸದಸ್ಯರ ಮುಂದೆ ಚರ್ಚಿಸಬಹುದೆ? ಇದ್ದರೆ ಆ ಸಂಗತಿಯನ್ನು ನಾನು ಆ ಭಾಗದ ಸಂಪೂರ್ಣ ವಿವರಣೆ ಎಂದು ಪರಿಗಣಿಸುವುದಿಲ್ಲ. ಅದರಲ್ಲಿ ಇರುವುದು ಬರೀ ವಾಕ್ಯಾತ್ಮಕ ಸಂಗತಿಗಳೇ ಹೊರತು ಅದರ ಬಗ್ಗೆ ಸುದೀರ್ಘವಾಗಿ ಯೋಚಿಸುವ ಅಗತ್ಯವಿಲ್ಲ. ಒಂದು ವೇಳೆ ಮೂಲಖಂಡದ ವಿಸ್ತರಣೆಯಾದಲ್ಲಿ ಈ ವಿವರಣೆಗೆ ಅಷ್ಟೊಂದು ಮಹತ್ವವಿರುವುದಿಲ್ಲ. ಹಾಗಾಗಿ ಈ ತಿದ್ದುಪಡಿಯಲ್ಲಿರುವ ಕೆಲವು ಸಂಗತಿಗಳನ್ನು ಅಂಗೀಕರವಾಗಲು ಪರಿಗಣಿಸಬೇಕೆ ಎಂಬುದನ್ನು ನನಗೆ ತಿಳಿಸಿ.

**ಶ್ರೀ ಕೆ.ಎಮ್. ಮುನ್ಷಿ :** ಮಾನ್ಯರೆ, ನಾನು ನನ್ನ ಮಿತ್ರ ಶ್ರೀ ಅಲ್ಲಾದಿಯವರ ಈ ಭಾಗವನ್ನು ಅದು ಇದ್ದ ಹಾಗೇ ಪುನಃ ಪರಿಶೀಲಿಸಿ ಪರಿಗಣಿಸಬೇಕೆಂದು ವಿನಂತಿಸುತ್ತಿದ್ದೇನೆ.

"ಈ ಸಂವಿಧಾನದ ಉಪಬಂಧಗಳಿಗೆ ಬದ್ಧವಾಗಿ ಮತ್ತು ಯಾವುದೇ ವಿಶೇಷ ಒಪ್ಪಂದಕ್ಕೆ ಒಳಪಟ್ಟಂತೆ, ಪ್ರಾಂತೀಯ ಶಾಸನಸಭೆಗೆ ಕಾನೂನು ರಚಿಸಲು ಅಧಿಕಾರವಿರುವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಪ್ರಾಂತ್ಯದ ಕಾರ್ಯನಿರ್ವಾಹಕ ಅಧಿಕಾರ ವಿಸ್ತರಿಸಲ್ಪಡುತ್ತದೆ."

ಆದರೆ 'ಯಾವುದೇ ವಿಶೇಷ ಒಪ್ಪಂದದಲ್ಲಿ' ಎಂಬ ಪದಗಳನ್ನು ಬಳಸುವಾಗ ನಾವು ಪ್ರಾಂತೀಯ ಶಾಸನ ಸಭೆಗಳ ಸದಸ್ಯರ ಅರ್ಹತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರಿಗೆ ಮಸೂದೆ ಜಾರಿಗೆ ತರುವ ಸಾಮರ್ಥ್ಯವಿದೆಯೆ? ಯಾಕೆಂದರೆ ಅದು ಸಂವಿಧಾನದ ಪ್ರತಿಷ್ಠೆಯ ಪ್ರಶ್ನೆಯಾಗಿರುವುದರಿಂದ ಒಂದು ವೇಳೆ ಅಚಾತುರ್ಯವಾದಲ್ಲಿ ಅದು ಗೊಂದಲವನ್ನು ಸೃಷ್ಟಿಸುತ್ತದೆ. ಇದರಲ್ಲಿ ವಿದೇಶಿ ವ್ಯವಹಾರಗಳೂ ಕೂಡ ಒಳಗೊಂಡಿರುವ ಸಾಧ್ಯತೆ ಇದೆ. ಆದ್ದರಿಂದ ಇದನ್ನು ಪರಿಗಣಿಸಲು ಸೂಕ್ತವಾದ ಅಭಿಪ್ರಾಯಗಳ ಅಗತ್ಯವಿದೆ. ಹಾಗಾಗಿ ಇದನ್ನು ನಾಳೆಯವರೆಗೆ ಮುಂದೂಡುವುದು ಒಳ್ಳೆಯದು ಎಂಬುದು ನನ್ನ ವಿಚಾರವಾಗಿದೆ.

**ಮಾನ್ಯ ಅಧ್ಯಕ್ಷರು :** ಕೆಲವು ಸದಸ್ಯರ ಅಭಿಪ್ರಾಯವನ್ನು ಮನ್ನಿಸಿ ಈ ಖಂಡಕ್ಕೆ ಸಂಬಂದಿಸಿದ ಚರ್ಚೆಯನ್ನು ನಾಳೆಗೆ ಮುಂದೂಡಲಾಗಿದೆ. ಈ ವಿಷಯದಲ್ಲಿ ಅವಸರದಲ್ಲಿ ಚರ್ಚಿಸುವುದು ತರವಲ್ಲ. ನಾಳೆ ಚರ್ಚಿಸೋಣ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಮುನ್ಷಿಯವರ ಮಂಡನೆಯ ಚರ್ಚೆಯನ್ನು ನಾಳೆಗೆ ಮುಂದೂಡುವುದನ್ನು ನಾನು ಬೆಂಬಲಿಸುತ್ತೇನೆ. ಆದರೆ ನನ್ನ ಪ್ರಸ್ತಾವಕ್ಕೆ ಪೂರಕವಾದ ಒಂದು ವಿಷಯವನ್ನು ತಿಳಿಸಲು ಬಯಸುತ್ತೇನೆ. ನನ್ನ ಸಲಹೆಯೇನೆಂದರೆ ಪ್ರಾಂತ್ಯವು ಕೇವಲ ಸಂವಿಧಾನದಡಿಯಲ್ಲಿ ಇರುವ ಒಂದು ಘಟಕವಷ್ಟೆ. ಹಾಗಾಗಿ ಸಂವಿಧಾನದ ಅಡಿಯಲ್ಲಿ ಕೆಲ ನಿರ್ದಿಷ್ಟ ಹಕ್ಕುಗಳು ಮತ್ತು ಒಂದು ಪ್ರಾಂತ್ಯವೊಂದು

ಕೆಲ ವಿಷಯಗಳ ಆಡಳಿತ ಜವಾಬ್ದಾರಿ ಹೊರಲಾದೀತೆ? ಅದು ಪ್ರಾಂತ್ಯಾತೀತ ವಲಯ, ಅದು ಹೌದಾಗಿದ್ದರೆ, ಶಾಸಕಾಂಗ, ಕಾರ್ಯಾಂಗ ಅಥವಾ ನ್ಯಾಯಾಂಗ ಕ್ಷೇತ್ರವನ್ನು ವಿಸ್ತರಿಸಿ. ಎಷ್ಟರ ಮಟ್ಟಿಗೆ ಒಪ್ಪಂದಕ್ಕೆ ಬೆಂಬಲ ನೀಡಬಹುದು? ಹಾಗಾಗಿ ಇಲ್ಲಿ ಸಂಯುಕ್ತ ಸರಕಾರದ ಪ್ರವೇಶವಿರಲೇಬೇಕು. ಪ್ರಾಂತ್ಯಗಳಿಗೆ ಸ್ವತಂತ್ರ ಕಾನೂನು ರಚಿಸುವ ಅಧಿಕಾರ ಅಷ್ಟೊಂದು ಸಮಂಜಸವಾದುದಲ್ಲ. ಆಡಳಿತದ ವಿಷಯದಲ್ಲಿ ವಿಧಾನಸಭೆ ರಾಜ್ಯಗಳು ಮತ್ತು ಸಂಯುಕ್ತ ಸರಕಾರದ ಮಧ್ಯೆ ಗೊಂದಲವುಂಟಾಗುತ್ತದೆ. ಆದ್ದರಿಂದ ಇದನ್ನು ಪರಿಗಣಿಸಲು ಸಾಕಷ್ಟು ಸಮಯ ಬೇಕಾಗುವುದರಿಂದ ನಾಳೆ ಮಧ್ಯಾಹ್ನ ೩ ಗಂಟೆಗೆ ಇದರ ಚರ್ಚೆಯಿಟ್ಟುಕೊಳ್ಳೋಣ ಇದನ್ನು ಈ ರೀತಿ ಬದಲಾಗುತ್ತದೆ.

"೧. ೧ನೇ ಅಧ್ಯಾಯದ ೮ನೇ ಕಂಡಿಕೆಯಲ್ಲಿ (Paragraph) 'ವಿಶೇಷ ಒಪ್ಪಂದ' ಎಂಬ ಪದವನ್ನು ತೆಗೆದುಹಾಕುವುದು"

೨. ೧ನೇ ಅಧ್ಯಾಯದ ೮ನೇ ಕಂಡಿಕೆಯ ಅನಂತರ ಈ ಕೆಳಗಿನ ಕಂಡಿಕೆಯನ್ನು ಸೇರಿಸುವುದು:

೮–ಎ ಪ್ರಾಂತ್ಯಗಳಿಗೆ ಶಾಸನಾಂಗ, ಕಾರ್ಯಾಂಗ ಅಥವಾ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಭಾರತದ ರಾಜ್ಯಗಳ ಪರವಾಗಿ ಶಾಸನ ರಚಿಸುವ ಹಕ್ಕನ್ನು ಕೊಡುವುದು. ಏನೇ ಆದರೂ ಈ ಭಾಗದ ಪ್ರಾಂತ್ಯಗಳಿಗೆ ಕೊಡುವ ಅಧಿಕಾರಗಳ ಬಗ್ಗೆ ಭಾರತದ ಸಂಯುಕ್ತ ಸರಕಾರಕ್ಕೆ ನಿರ್ಧಾರ ಬಿಡಲಾಗಿದೆ.

**ಸಮಾರೋಪ** : ಪ್ರಾಂತ್ಯಗಳ ಈ ವ್ಯವಸ್ಥೆಯ ಒಪ್ಪಂದದ ಸಮಯದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯಗಳಲ್ಲಿ ಯೋಗ್ಯ ಪ್ರಾಂತ್ಯಾಧಿಕಾರದ ನಿಯಮದಂತೆ ಕಾರ್ಯ ನಿರ್ವಹಿಸಬೇಕು. ಒಂದು ವೇಳೆ ಉಪಬಂಧವಿದ್ದಲ್ಲಿ ಸಂಪೂರ್ಣವಾಗಿ ಈ ಸಾಲನ್ನು ಚರ್ಚಿಸಬೇಕು. ಈಗ ಮುಂದೂಡುವ ಉದ್ದೇಶವೇ ಕೇಂದ್ರ ಸಂವಿಧಾನದ ಪರಿಗಣನೆಯ ಬಗ್ಗೆ ವಿಚಾರಿಸುವುದಾಗಿರುತ್ತದೆ. ಇನ್ನೊಂದು ವಿಷಯದ ಬಗ್ಗೆ ಅರ್ಥಾತ್ ಈ ಭಾಗಕ್ಕೆ ಉಪಭಾಗವನ್ನು ಸೇರಿಸಲು ಸಾಧ್ಯವಾಗುವುದು ಖಚಿತವಿಲ್ಲ. ಎಂದೆನಿಸುತ್ತದೆ. ಈ ವಿಷಯಗಳ ಚರ್ಚೆ ನಾಳೆ ಮುಂಜಾನೆಯವರೆಗೆ ಮುಂದೂಡಲ್ಪಟ್ಟಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ನಾನು ಆ ವಿಷಯದಲ್ಲಿರುವ ಕೆಲವು ಕಾನೂನಿನ ತೊಡಕುಗಳ ಬಗ್ಗೆ ಮತ್ತು ಮುಂದೆ ಅದನ್ನು ಪರಿಗಣಿಸಬೇಕಾದಾಗ ಆಗುವ ತೊಂದರೆಯ ಬಗ್ಗೆ ಶ್ರೀ ಅಲ್ಲಾದಿಯವರು ಸೂಚಿಸಿದಂತೆ ಕೆಲವು ಸಲಹೆಗಳನ್ನು ನೀಡಲೆ? ಈ ಪ್ರಶ್ನೆಯನ್ನು ಬಗೆಹರಿಸಲು ಇಬ್ಬರು ಅಥವಾ ಮೂರು ವಕೀಲರುಗಳನ್ನು ನೇಮಿಸಬೇಕಾಗುತ್ತದೆ. ಇದನ್ನು ಪರಿಗಣಿಸಬೇಕಾದಲ್ಲಿ, ಇದರ ಸುಧಾರಣೆ ಮಾಡಿ ಕಾನೂನು ಪ್ರಕಾರ ಯಾವುದೇ ಅಡ್ಡಿಯಾಗದಂತೆ ಮಾಡಿ, ನಾಳೆ ಬಗೆಹರಿಸಲು ಸುಲಭವಾಗುತ್ತದೆ.

**ಚೌಧರಿ ಖಲಿ ಖುಜ್ಜಮಾನ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ನಾನು ಇದನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ನೀವು ಹೆಸರುಗಳನ್ನು ಸೂಚಿಸುವಿರಾ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್** : ಮಾನ್ಯರೆ, ಅಲ್ಲಾದಿ, ಡಾ. ಅಂಬೇಡ್ಕರ್, ಡಾ. ಮುನ್ಷಿ ಮತ್ತು ಶ್ರೀ ಚಂದ್ರಿಗರ್.

**ಓರ್ವ ಗೌರವಾನ್ವಿತ ಸದಸ್ಯ** : ಇದು ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದ ವಿಷಯ. ಇದರಲ್ಲಿ ರಾಜ್ಯ ಪ್ರತಿನಿಧಿಗಳನ್ನು ಸೇರಿಸಬಹುದು?

**ಶ್ರೀ ಕೆ.ಎಮ್. ಮುನ್ಷಿ** : ಮಾನ್ಯರೆ, ಶ್ರೀ ಬಿ.ಎಲ್. ಮಿಟ್ಟರ್‌ರವರ ಹೆಸರನ್ನು ನಾನು ಸೂಚಿಸುತ್ತೇನೆ.

**ಮನ್ಯ ಮಹಮ್ಮದ್ ಶರೀಫ್** : (ಮೈಸೂರು) ಈ ಸಮಿತಿಯಲ್ಲಿ ಶ್ರೀ ಕರ್ಾಟ್ ರಾಮಸ್ವಾಮಿ ಮೊದಲಿಯರ್ ಅವರ ಹೆಸರನ್ನು ಸೇರಿಸಬಹುದು. ಈ ವಿಷಯುವನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿರುವುದರಿಂದ ನಾವು ರಾಜ್ಯಗಳನ್ನು ಪ್ರತಿನಿಧಿಸುತ್ತಿದ್ದೇವೆ. ಈಗಾಗಲೇ ಸಭೆ

ಮುಂದೂಡಲ್ಪಟ್ಟಿರುವುದರಿಂದ ನಾಳೆಯ ವೇಳೆ ಬಹಳಷ್ಟು ವಾದವಿವಾದಗಳುಂಟಾಗಬಹುದು. ನಾವು ಎಲ್ಲ ಅಂಶಗಳನ್ನೂ ಇದರಲ್ಲಿ ಸೇರಿಸಬೇಕಾಗುತ್ತದೆ. ಹಾಗಾಗಿ ಮೈಸೂರಿನ ದಿವಾನರನ್ನೂ ಸಮಿತಿಯಲ್ಲಿ ಸೇರಿಸುವುದೊಳಿತು ಎಂದು ನನ್ನ ಅಭಿಪ್ರಾಯ.

**ಮಾನ್ಯ ಅಧ್ಯಕ್ಷರು** : ಈಗ ಒಟ್ಟು ಆರು ಹೆಸರುಗಳನ್ನು ಸೇರಿಸಲಾಗಿದೆ. ಶ್ರೀ ಬಿ.ಎಲ್. ಮಿಟ್ಟರ್, ಶ್ರೀ ಎ. ರಾಮಸ್ವಾಮಿ ಮೊದಲಿಯಾರ್, ಅವರನ್ನು ಸೇರಿಸಿದ್ದೇನೆ. ಸದನವು ನಾಳೆ ಕೆಲವು ಸಲಹೆಗಳನ್ನು ಸ್ವೀಕರಿಸುವಾಗ ಒಂದು ಉಪಸಮಿತಿಯೂ ಇರಬೇಕಾಗುತ್ತದೆ. ಒಬ್ಬ ಸದಸ್ಯರಿಂದ ಒಂದು ಪ್ರಶ್ನೆ ಕೇಳಲಾಗುವುದು. ಆ ಭಾಗದ ಕೆಲವು ಸಂಗತಿಗಳನ್ನು ಸೇರಿಸುವ ಅಗತ್ಯವಿಲ್ಲ ಎಂದೆನಿಸುತ್ತದೆ. ಅದನ್ನು ಕೇವಲ ವಿವರಣೆಗೆ ಬಳಸಬಹುದು.

**ಶ್ರೀ ದೇಬಿ ಪ್ರಸಾದ್ ಖೈತಾನ್** : ನಾನು ಒಂದು ಸಲಹೆ ನೀಡಲು ಇಚ್ಛಿಸುತ್ತೇನೆ. ಸಂಗತಿಗಳನ್ನು ನಿರ್ಣಯಿಸುವಾಗ, ಸೇರಿಸಲು ಪರಿಗಣಿಸದಿರುವ ಬಗ್ಗೆ ೯ನೇ ಖಂಡ ಹೀಗೆ ತಿಳಿಸುತ್ತದೆ. ಪ್ರಾಯಶಃ ಅದನ್ನು ನಿರ್ಣಯದ ಒಂದು ಭಾಗವಾಗಿ ಪರಿಗಣಿಸಬಹುದೇನೋ.

"ಬಹುತೇಕ ಸಲಹೆಯ ಮೇರೆಗೆ ರಾಜ್ಯಪಾಲರು ಕಾರ್ಯನಿರ್ವಹಿಸುತ್ತಾರೆ. ಆದರೆ ಕೆಳಗಿನ ವಿಷಯಗಳಲ್ಲಿ ರಾಜ್ಯಪಾಲರು ಸ್ವವಿವೇಚನಾನುಸಾರ ಕಾರ್ಯನಿರ್ವಹಿಸುತ್ತಾರೆ" ನನ್ನ ಮನವಿಯೇನೆಂದರೆ, ಸಾಮಾನ್ಯ ಹೇಳಿಕೆಯ ಅಗತ್ಯವಿಲ್ಲ. ಒಂದು ವೇಳೆ ಇದ್ದಲ್ಲಿ ಈ ನೋಟೀಸಿನ ಬಗ್ಗೆ ಇರಬಹುದು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ಖಂಡ ೯ರ ಟಿಪ್ಪಣಿಯಲ್ಲಿರುವಂತೆ ನಾವು ನಾಳೆ ಚರ್ಚಿಸಬೇಕು. ಆದರೆ ಅದು ಖಂಡಕ್ಕೆ ಸಂಬಂಧಿಸಿದ ವಿಷಯವೇ ಅಲ್ಲ.

**ಶ್ರೀ ಸಿ.ವಿ. ಕೃಷ್ಣಸ್ವಾಮಿ ರಾವ್** : (ಮೈಸೂರು) : ಮಾನ್ಯರೆ, ನಾಳೆ ಈ ಸಮಿತಿ ೮ನೇ ಖಂಡವನ್ನು ಪರಿಗಣಿಸುವಾಗ, ಕೆಲವು ವಿಷಯಗಳಲ್ಲಿ ಒಪ್ಪಂದದ ಬಗ್ಗೆ ನಿರ್ಣಯಿಸುವಾಗ ಪ್ರಾಂತ್ಯಗಳೂ ರಾಜ್ಯಗಳ ಜೊತೆ ಕೈ ಜೋಡಿಸುವ ಸಾಧ್ಯತೆ ಇದೆಯೆ? ಅಥವಾ ರಾಜ್ಯಗಳಿಗೆ ಕೆಲವು ವಿಷಯಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರ ಕೊಡಬೇಕೆ? ಪ್ರಶ್ನೆಗಳನ್ನು ಸಮಿತಿ ನಾಳೆ ಪರಿಗಣಿಸುವುದೆ?

**ಮಾನ್ಯ ಅಧ್ಯಕ್ಷರು** : ಆ ಪ್ರಶ್ನೆಗಳು ಉದ್ಭವಿಸಿದಲ್ಲಿ ಪರಿಗಣಿಸಲಾಗುವುದು. ಇದರ ಬಗ್ಗೆ ನಾಳೆ ಯೋಚಿಸೋಣ.

**ಶ್ರೀ ಎನ್.ವಿ. ಗಾಡ್ಗಿಳ್** (ಬಾಂಬೆ : ಸಾಮಾನ್ಯ) : ಈಗಾಗಲೇ ಸಂಜೆ ೫.೩೦ ಗಂಟೆಯಾಗಿದೆ. ಚರ್ಚೆಯನ್ನು ನಾಳೆಗೆ ಮುಂದೂಡೋಣ. ಇವತ್ತು ಉತ್ತಮ ರೀತಿಯಲ್ಲಿ ಕೆಲಸವಾಗಿದೆ.

**ಮಾನ್ಯ ಅಧ್ಯಕ್ಷರು** : ನಾವು ಈಗ ಸದನದ ಅಧಿವೇಶನವನ್ನು ಮುಂದೂಡೋಣವೆ? (ಗೌರವಾನ್ವಿತ ಸದಸ್ಯರು : ಆಗಬಹುದು) ಸದನವು ಬಿಡುವಿನ ಮನಃಸ್ಥಿತಿಯಲ್ಲಿದೆ. ಆದ್ದರಿಂದ ನಾಳೆ ಮಧ್ಯಾಹ್ನ ३.೦೦ ಗಂಟೆಯವರೆಗೆ ಸಭೆಯನ್ನು ಮುಂದೂಡಲಾಗಿದೆ.

ಸಭೆಯನ್ನು ವಿಸರ್ಜಿಸುವ ಮುನ್ನ ನಾನೊಂದು ಪ್ರಕಟಣೆ ನೀಡಬೇಕಿದೆ. ಒಕ್ಕೂಟದ ಸಂವಿಧಾನದ ತಿದ್ದುಪಡಿ ಕಳುಹಿಸಲು ನಾನು ನೀಡಿರುವ ಗಡುವು ತೀರಾ ಕಡಿಮೆ (ಎಂದರೆ ರಾತ್ರಿ ೯ ಗಂಟೆ) ಎಂಬುದನ್ನು ನನ್ನ ಗಮನಕ್ಕೆ ತರಲಾಗಿದೆ. ಕೆಲವು ಸದಸ್ಯರು ಗಡುವಿಸ್ತರಣೆ ಕೋರಿದ್ದಾರೆ. ಆದುದರಿಂದ ಶುಕ್ರವಾರ ಸಂಜೆ ೫ ಗಂಟೆಯವರೆಗೆ ಗಡು ವಿಸ್ತರಿಸಿದ್ದೇನೆ.

ಸಭೆಯನ್ನು ಜುಲೈ, ೧೭ನೇ, ೧೯೪೭ ಗುರುವಾರ ಮಧ್ಯಾಹ್ನ ३.೦೦ ಗಂಟೆಯವರೆಗೆ ಮುಂದೂಡಲಾಯಿತು.